# ಕರ್ನಾಟಕ ಸರ್ಕಾರ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ / ಕಿತ್ತೂರು ರಾಣಿ ಚೆನ್ನಮ್ಮ / ಏಕಲವ್ಯ ಮಾದರಿ / ಅಟಲ್ ಬಿಹಾರಿ ವಾಜಪೇಯಿ / ಶ್ರೀಮತಿ ಇಂದಿರಾ ಗಾಂಧಿ / ಡಾ: ಬಿ.ಆರ್. ಅಂಬೇಡ್ಕರ್ ಮುಂತಾದ ವಿವಿಧ ಹೆಸರಿನ ವಸತಿ ಶಾಲೆಗಳಿಗೆ 2020ನೇ ಸಾಲಿನಲ್ಲಿ 6ನೇ ತರಗತಿ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಕೆ, ಪ್ರವೇಶ ಪರೀಕ್ಷೆ ಮತ್ತು ದಾಖಲಾತಿಗಳ ಬಗ್ಗೆ ಮಾರ್ಗಸೂಚಿಗಳು.

ಇ–ಬ್ರೋಚರ್–(ಮಾಹಿತಿ ಪುಸ್ತಕ)

## ಕರ್ನಾಟಕ ಪರೀಕ್ಷಾ ಪ್ರಾಧಿಕಾರ

18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 012
ಇ–ಮೇಲ್: keauthority-ka@nic.in ವೆಬ್ ಸೈಟ್: http://kea.kar.nic.in
ಸಹಾಯವಾಣಿ: 080–23 460 460 (5 ಲೈನ್‌ಗಳು) (ಬೆ. 9.30 ರಿಂದ ಸಂ. 6.00 ರ ವರೆಗೆ)

## ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ

(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ).

**ನಂ.8, ಎಂ.ಎಸ್.ಬಿ. 1, 6 ಮತ್ತು 7ನೇ ಮಹಡಿ, ಕನ್ನಿಂಗ್ ಹ್ಯಾಮ್‌ರಸ್ತೆ,**
**ಬೆಂಗಳೂರು – 560052.**
**ದೂರವಾಣಿ ಸಂಖ್ಯೆ : 080– 22283366, 22265755, 22204466, 22207722.**
ಟೆಲಿಫ್ಯಾಕ್ಸ್– 080 –22262288 ಇ–ಮೇಲ್: edkreis@rediff.com
ವೆಬ್ ಸೈಟ್: www: kreis.kar.nic.in

## ಸಂಕ್ಷಿಪ್ತ ಮಾಹಿತಿ

1. ಅಭ್ಯರ್ಥಿಯು ರಾಜ್ಯದಲ್ಲಿರುವ ಯಾವುದೇ ವಸತಿ ಶಾಲೆ / ಕಾಲೇಜಿನಿಂದ ಅರ್ಜಿಯನ್ನು ಸಲ್ಲಿಸಬೇಕು.
2. ಅಭ್ಯರ್ಥಿಯು ಮೊದಲು ತನ್ನ SATS ಸಂಖ್ಯೆಯನ್ನು ತಾನು ಓದುತ್ತಿರುವ ಶಾಲೆಯಿಂದ ಪಡೆಯಬೇಕು ನಂತರ ಹತ್ತಿರದ ವಸತಿ ಶಾಲೆಯಿಂದ ಅರ್ಜಿ ಸಲ್ಲಿಸತಕ್ಕದ್ದು.
3. ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ www.kreis.kar.nic.in ಲಿಂಕ್ ಅನ್ನು ಆಯ್ಕೆ ಮಾಡಿಕೊಳ್ಳಬೇಕು.
4. ಅಭ್ಯರ್ಥಿಯ ನಂತರ ತನ್ನ SATS ಸಂಖ್ಯೆಯನ್ನು ನಮೂದಿಸಬೇಕು. ಅಭ್ಯರ್ಥಿಯ ತನ್ನ ಎಲ್ಲಾ ವಿವರಗಳನ್ನು ಕಂಪ್ಯೂಟರ್ ಪರದೆಯ ಮೇಲೆ ನೋಡಬಹುದು.
5. ಅಭ್ಯರ್ಥಿಯ ಹೆಸರು, ತಂದೆಯ ಹೆಸರು, ತಾಯಿಯ ಹೆಸರು, ಜಾತಿ ಮೀಸಲಾತಿ ಪ್ರವರ್ಗ, ಜನ್ಮ ದಿನಾಂಕ, ಲಿಂಗ, ಇತ್ಯಾದಿಗಳನ್ನು ನೋಡಬಹುದು, ಇವುಗಳಲ್ಲಿ ಏನಾದರು ವ್ಯತ್ಯಾಸವಿದ್ದಲ್ಲಿ ತಾನು ಓದುತ್ತಿರುವ ಶಾಲೆಯಿಂದ ತಿದ್ದುಪಡಿ ಮಾಡಿಕೊಂಡು ನಂತರ ಅರ್ಜಿ ಸಲ್ಲಿಸಲು ಸೂಚಿಸಿದೆ.
6. ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ಸೂಚಿಸತಕ್ಕದ್ದು.
7. ವಿಶೇಷ ವರ್ಗಕ್ಕೆ ಸೇರಿದವರಾಗಿದ್ದಲ್ಲಿ ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ದಾಖಲೆಗಳನ್ನು ಅರ್ಜಿ ಸಲ್ಲಿಸುವ ಸಮಯದಲ್ಲಿ ಶಾಲೆಯ ಪ್ರಿನ್ಸಿಪಾಲರಿಗೆ ತೋರಿಸಬೇಕು ಮತ್ತು ಅವುಗಳ ಒಂದು ನಕಲು ಪ್ರತಿಯನ್ನು ಸಲ್ಲಿಸಬೇಕು.

8. ವಸತಿ ಶಾಲೆಗಳ ನಮೂದಿಸುವ ಕ್ರಮ – ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಾಗ ಯಾವ ಶಾಲೆಗಳಲ್ಲಿ ದಾಖಲಾತಿ ಬಯಸುತ್ತಾನೋ/ಳೋ, ಅಂತಹ ಶಾಲೆಗಳನ್ನು ಆದ್ಯತಾ ಕ್ರಮದಲ್ಲಿ ಆಯ್ಕೆ ಮಾಡಿಕೊಳ್ಳಬೇಕು. ಆದ್ಯತಾ ಕ್ರಮದಲ್ಲಿ ದಾಖಲಿಸುವ ಶಾಲೆಗಳನ್ನು ಮಾತ್ರ ಹಂಚಿಕೆಗೆ ಪರಿಗಣಿಸಲಾಗುವುದು. ಪ್ರವೇಶ ಪರೀಕ್ಷೆಯಲ್ಲಿ ಗಳಿಸಿದ ಮೆರಿಟ್ ಆಧಾರದ ಮೇಲೆ ಶಾಲೆಗಳ ಹಂಚಿಕೆಯನ್ನು ಮಾಡಲಾಗುವುದು.

   ಪೋಷಕರ ಗಮನಕ್ಕೆ: ಅಭ್ಯರ್ಥಿಗಳ ಪೋಷಕರು ತಮ್ಮ ಜಿಲ್ಲೆಯಲ್ಲಿ ಸ್ಥಾಪಿಸಲಾಗಿರುವ ವಸತಿ ಶಿಕ್ಷಣ ಶಾಲೆಗಳ ವಿವರಗಳನ್ನು ಪಡೆದು ಕೊಂಡು, ತಮ್ಮ ಮಕ್ಕಳನ್ನು ಯಾವ ಶಾಲೆಗೆ ಸೇರಿಸಬೇಕು ಎಂಬುದನ್ನು ತೀರ್ಮಾನಿಸಿ ಆದ್ಯತಾ ಕ್ರಮದಲ್ಲಿ ನಮೂದಿಸಬೇಕು. ಈ ಮೇಲಿನ ಅಂಶಗಳನ್ನು Declaration ನೀಡುವ ಮೊದಲು ಎಷ್ಟು ಬಾರಿಯಾದರೂ ಬದಲಾಯಿಸಬಹುದು ಆದರೆ Declaration ನಂತರ ಬದಲಾಯಿಸಲು ಅವಕಾಶವಿರುವುದಿಲ್ಲ. ಆದ್ದರಿಂದ ಶಾಲೆಗಳನ್ನು ದಾಖಲಿಸುವ ಮೊದಲು ಒಂದು ಹಾಳೆಯಲ್ಲಿ ಬರೆದುಕೊಂಡು ವಿಚಾರ ಮಾಡಿ ನಂತರ ದಾಖಲಿಸುವುದು ಸೂಕ್ತ.
9. ನಂತರ ಅಂತಿಮವಾಗಿ ಸಲ್ಲಿಕೆ ಮಾಡಿದ ಆನ್‌ಲೈನ್ ಅರ್ಜಿಯನ್ನು ಪ್ರಿಂಟ್ ತೆಗೆದುಕೊಂಡು ಒಂದು ಪ್ರತಿಯನ್ನು ಸಹಿಯೊಂದಿಗೆ ಶಾಲೆಗೆ ಹಾಜರುಪಡಿಸಬೇಕು.

## ಪರಿವಿಡಿ

| ಕ್ರ. ಸಂ. | ವಿಷಯ ಸೂಚಿ |
|---|---|
| 1 | ಪೀಠಿಕೆ |
| 2 | 6ನೇ ತರಗತಿಗೆ ಪ್ರವೇಶ ಪರೀಕ್ಷೆ ಹಾಗೂ ಇತರ ಕಾರ್ಯಕ್ರಮಗಳ ವೇಳಾಪಟ್ಟಿ |
| 3 | ಪ್ರವೇಶ ಸಂಖ್ಯೆ |
| 4 | ವರ್ಗವಾರು ಸ್ಥಾನ ಹಂಚಿಕೆ |
| 5 | ವಿಶೇಷ ವರ್ಗಗಳಿಗೆ ಸ್ಥಾನ ಹಂಚಿಕೆ |
| 6 | ವಿಶೇಷ ವರ್ಗಗಳ ಅರ್ಥ |
| 7 | ಜಾತಿ ಮತ್ತು ಆದಾಯ ಪ್ರಮಾಣ ಪತ್ರ |
| 8 | ಅಭ್ಯರ್ಥಿ ಅರ್ಜಿಸಲ್ಲಿಸಲು ಇರಬೇಕಾದ ಅರ್ಹತೆಗಳು |
| 9 | ಲಿಂಗ ಮತ್ತು ಜಾತಿವಾರು ಖಾಲಿ ಉಳಿದ ಸ್ಥಾನಗಳ ಭರ್ತಿ ವಿವರ |
| 10 | ವಸತಿ ಶಾಲೆಗಳ ಆಯ್ಕೆಗೆ ಆದ್ಯತೆ ದಾಖಲಿಸುವ ವಿಧಾನ |
| 11 | ಪ್ರವೇಶ ಪರೀಕ್ಷೆ ವಿಧಾನ |
| 12 | ಲಿಖಿತ ಪರೀಕ್ಷೆಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿ |
| 13 | ಮೆರಿಟ್ ನಿರ್ಧರಿಸುವಿಕೆ |
| 14 | ಫಲಿತಾಂಶ ಪ್ರಕಟಣೆ |
| 15 | ಸೀಟು ಹಂಚಿಕೆ ಮತ್ತು ದಾಖಲಾತಿ |

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಸಕಇ ಮೊದೇಶಾ 2020, ಬೆಂಗಳೂರು ದಿನಾಂಕ 10–03–2020 ಅನ್ನು ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ.

**ಗಮನಿಸಿ:**

1. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ನಂತರ ಕಡ್ಡಾಯವಾಗಿ Declaration ಅನ್ನು ಆಯ್ಕೆ ಮಾಡಿದರೆ ಮಾತ್ರ ಅರ್ಜಿ ಸಲ್ಲಿವಿಕೆಯು ಪೂರ್ಣಗೊಳ್ಳುತ್ತದೆ.

2. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಭ್ಯರ್ಥಿಯು ಸೇರಬಯಸುವ ವಸತಿ ಶಾಲೆಗಳ ವಿವರಗಳನ್ನು ಅಂದರೆ ಇಚ್ಛೆ (Options) ಗಳನ್ನು ಕಡ್ಡಾಯವಾಗಿ ಆದ್ಯತಾ ಕ್ರಮದಲ್ಲಿ ನಮೂದಿಸಬೇಕು. ಒಂದು ವೇಳೆ ಅಭ್ಯರ್ಥಿಯು ಆದ್ಯತಾ ಕ್ರಮದಲ್ಲಿ ಶಾಲೆಗಳ ವಿವರಗಳನ್ನು ನೀಡದಿದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ಸೀಟು ಹಂಚಿಕೆಗೆ ಪರಿಗಣಿಸಲಾಗುವುದಿಲ್ಲ.

## 1. ಪೀಠಿಕೆ:–

ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಿಂದುಳಿದ ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಸತಿ ಸಹಿತ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಕರ್ನಾಟಕ ರಾಜ್ಯ ಸರ್ಕಾರದ ವತಿಯಿಂದ ಮೊರಾರ್ಜಿ ದೇಸಾಯಿ / ಕಿತ್ತೂರುರಾಣಿ ಚೆನ್ನಮ್ಮ / ಏಕಲವ್ಯ ಮಾದರಿ / ಅಟಲ್ ಬಿಹಾರಿ ವಾಜಪೇಯಿ ಮೊದಲಾದ ವಿವಿಧ ಹೆಸರಿನಿಂದ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಈ ಎಲ್ಲಾ ವಸತಿ ಶಾಲೆಗಳಿಗೆ ಪ್ರಾರಂಭಿಕ ತರಗತಿಯಾದ 6ನೇ ತರಗತಿಗೆ ಪ್ರವೇಶ ಪರೀಕ್ಷೆ ನಡೆಸಿ ಆನ್‌ಲೈನ್ ಮುಖಾಂತರ ವಿದ್ಯಾರ್ಥಿಗಳನ್ನು ಭರ್ತಿ ಮಾಡಲು ಸರ್ಕಾರವು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ನಿರ್ದೇಶನ ನೀಡಿರುತ್ತದೆ.

ಅದರಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ರಾಜ್ಯದಾದ್ಯಂತ ಏಕಕಾಲದಲ್ಲಿ ರಾಜ್ಯ ಮಟ್ಟದ ಪ್ರವೇಶ ಪರೀಕ್ಷೆಯನ್ನು ನಡೆಸಲಾಗುವುದು ಹಾಗೂ ಸದರಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಪಡೆದ ಅಂಕಗಳ ಆಧಾರದ ಮೇಲೆ ರಾಜ್ಯ ಮಟ್ಟದ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸಿ, ಜಿಲ್ಲಾವಾರು ಆನ್‌ಲೈನ್ ಮೂಲಕ Computer Auto Selection ಮಾಡಲಾಗುವುದು. ಜಿಲ್ಲಾ ಹಂತದ 2 ಮತ್ತು 3ನೇ ಸುತ್ತಿನ ಕೌನ್ಸಿಲಿಂಗ್ ಮುಕ್ತಾಯದ ನಂತರ ಖಾಲಿ ಉಳಿದ ಸ್ಥಾನಗಳಿಗೆ ರಾಜ್ಯ ಮಟ್ಟದ ಆನ್‌ಲೈನ್ ಸೀಟು ಹಂಚಿಕೆ ಮಾಡಲಾಗುವುದು.

## 2. 2020–21ನೇ ಸಾಲಿನ 6ನೇ ತರಗತಿಗೆ ದಾಖಲಾತಿಗಾಗಿ ನಡೆಸುವ ಪ್ರವೇಶ ಪರೀಕ್ಷೆ ವೇಳಾಪಟ್ಟಿ:–

| ಕ್ರ. ಸಂ. | ವಿವರ | ದಿನಾಂಕ |
|---|---|---|
| 01 | ಮಾಹಿತಿ ಪುಸ್ತಕವನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸುವ ದಿನಾಂಕ | ದಿನಾಂಕ 11–03–2020 |
| 02 | ಅಧಿಸೂಚನೆಯನ್ನು ದಿನಪತ್ರಿಕೆಗಳಲ್ಲಿ ಮತ್ತು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸುವ ದಿನಾಂಕ | ದಿನಾಂಕ 12–03–2020 |
| 03 | ಆನ್‌ಲೈನ್ ಮುಖಾಂತರ ಹತ್ತಿರದ ವಸತಿ ಶಾಲೆಯಿಂದ ಅರ್ಜಿ ಸಲ್ಲಿಸುವುದು | ದಿನಾಂಕ 11–03–2020 ರ ಬೆ.11.00 ರಿಂದ 03–04–2020 ರ ಸಂ. 5.30ರ ವರೆಗೆ |
| 04 | ಅರ್ಹ ಅಭ್ಯರ್ಥಿಗಳು ಪ್ರವೇಶ ಪತ್ರವನ್ನು ಅರ್ಜಿ ಸಲ್ಲಿಸಿದ ವಸತಿ ಶಾಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳುವುದು | ದಿನಾಂಕ 20–04–2020 ರ ಬೆ. 11.00 ರಿಂದ |
| 05 | ಪ್ರವೇಶ ಪರೀಕ್ಷೆ ನಡೆಸಲಾಗುವ ದಿನಾಂಕ | ದಿನಾಂಕ 06–05–2020 ಬೆ. 11.00 ರಿಂದ ಮ.1.00 (ಬೆಳಿಗ್ಗೆ 10.30 ರೊಳಗಾಗಿ ಪರೀಕ್ಷಾ ಕೇಂದ್ರದಲ್ಲಿ ಹಾಜರಿರುವುದು) |
| 06 | ಪ್ರವೇಶ ಪರೀಕ್ಷೆಯ ಫಲಿತಾಂಶ ಮತ್ತು ಮೊದಲನೇ ಸುತ್ತಿನ ಶಾಲೆಗಳ ಹಂಚಿಕೆ | ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು |
| 07 | ಎರಡನೇ ಮತ್ತು ಮೂರನೇ ಹಾಗು ಅಂತಿಮ ಸುತ್ತಿನ ಸೀಟು ಹಂಚಿಕೆಯ ವೇಳಾಪಟ್ಟಿ | ಪ್ರಾಧಿಕಾರ ಹಾಗು ವಸತಿ ಸಂಘದ ವೆಬ್ ಸೈಟುಗಳಲ್ಲಿ ಪ್ರಕಟಿಸಲಾಗುವುದು |

## 3. ಪ್ರವೇಶ ಸಂಖ್ಯೆ:

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯ ನಿರ್ವಹಿಸುವ ವಸತಿ ಶಾಲೆಗಳನ್ನು ಮೊರಾರ್ಜಿ ದೇಸಾಯಿ / ಕಿತ್ತೂರು ರಾಣಿ ಚೆನ್ನಮ್ಮ / ಡಾ॥ ಬಿ.ಆರ್ ಅಂಬೇಡ್ಕರ್ / ಶ್ರೀಮತಿ ಇಂದಿರಾ ಗಾಂಧಿ / ಅಟಲ್ ಬಿಹಾರಿ ವಾಜಪೇಯಿ /ಏಕಲವ್ಯ / ಕವಿರನ್ನ / ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮೊದಲಾದ ಹೆಸರುಗಳಿಂದ ಕರೆಯಲಾಗುತ್ತಿದೆ. ಈ ಶಾಲೆಗಳ ಪ್ರವೇಶ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.

| ಕ್ರ. ಸಂ. | ವಸತಿ ಶಾಲೆ | 6ನೇ ತರಗತಿಗೆ ಮಂಜೂರಾದ ವಿದ್ಯಾರ್ಥಿಗಳ ಸಂಖ್ಯೆ |
|---|---|---|
| 1 | ಮೊರಾರ್ಜಿ ದೇಸಾಯಿ ವಸತಿ ಶಾಲೆ | 50 |
| 2 | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ | 50 |
| 3 | ಡಾ॥ ಬಿ.ಆರ್ ಅಂಬೇಡ್ಕರ್ ವಸತಿ ಶಾಲೆ | 50 |
| 4 | ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆ | 50 |
| 5 | ಮಾಸ್ತಿ ವೆಂಕಟೇಶ ಅಯ್ಯಂಗರ್ ವಸತಿ ಶಾಲೆ | 50 |
| 6 | ಸಂಗೊಳ್ಳಿ ರಾಯಣ್ಣ ವಸತಿ ಶಾಲೆ | 50 |
| 7 | ಅಲೆಮಾರಿ ವಸತಿ ಶಾಲೆ | 50 |
| 8 | ಕವಿರನ್ನ ವಸತಿ ಶಾಲೆ | 50 |
| 9 | ಗಾಂಧಿತತ್ವ ವಸತಿ ಶಾಲೆ | 50 |
| 10 | ಶಿಕ್ಷಣ ಇಲಾಖೆಯಿಂದ ವರ್ಗಾವಣೆಗೊಂಡ ವಸತಿ ಶಾಲೆ | 50 |
| 11 | ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ | 80 |
| 12 | ಏಕಲವ್ಯ ಮಾದರಿ ವಸತಿ ಶಾಲೆ | 60 |

## 4. ವರ್ಗವಾರು ಸ್ಥಾನ ಹಂಚಿಕೆ:

1. ವರ್ಗವಾರು ಪ್ರವೇಶ ಸಂಖ್ಯೆ:- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಸಾಮಾನ್ಯ ವರ್ಗದ ವಸತಿ ಶಾಲೆಗಳಿಗೆ ಸಂಖ್ಯೆ ಆಧಾರದ ಮೇಲೆ ಸ್ಥಾನಗಳ ವಿವರ:

| ಕ್ರ. ಸಂ | ವಸತಿ ಶಾಲೆ | ಪ.ಜಾತಿ | ಪ.ಪಂಗಡ | ಹಿಂ.ವರ್ಗ | ಸಾಮಾನ್ಯ | ಒಟ್ಟು |
|---|---|---|---|---|---|---|
| 1 | ಸಮಾಜ ಕಲ್ಯಾಣ ಇಲಾಖೆಯಿಂದ ಅನುಧಾನ ಒದಗಿಸುವ (ಅನುಸೂಚಿತ ಜಾತಿಯ ವಸತಿ ಶಾಲೆಗಳು) | 38 | 05 | 07 | 0 | **50** |
| 2 | ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಅನುಧಾನ ಒದಗಿಸುವ ಪ.ಪಂಗಡದ ವಸತಿ ಶಾಲೆಗಳು | 05 | 38 | 07 | 0 | **50** |

| | | | | | | |
|---|---|---|---|---|---|---|
| 3 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅನುಧಾನ ಒದಗಿಸುವ ವಸತಿ ಶಾಲೆಗಳು | 07 | 05 | 38 | 0 | **50** |
| 4 | ಶಿಕ್ಷಣ ಇಲಾಖೆಯಿಂದ ವರ್ಗಾವಣೆಗೊಂಡ (ಸಾಮಾನ್ಯ) | 08 | 05 | 12 | 25 | **50** |
| 5 | ಏಕಲವ್ಯ ಮಾದರಿ ವಸತಿ ಶಾಲೆಗಳು | 04 | 54 | 02 | 0 | **60** |
| 6 | ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು (ಪ.ಜಾತಿ) | 60 | 08 | 12 | 0 | **80** |
| 7 | ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು (ಪ.ಪಂಗಡ) | 08 | 60 | 12 | 0 | **80** |
| 8 | ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು (ಹಿಂ.ವರ್ಗ) | 12 | 08 | 60 | 0 | **80** |

- ಅಲೆಮಾರಿ ವಸತಿ ಶಾಲೆಗೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಪೋಷಿಸಲಾಗಿರುವ ಅಲೆಮಾರಿ ವರ್ಗದ ಅಭ್ಯರ್ಥಿಗಳಿಗೆ **ಶೇಕಡ 100ರಷ್ಟು ಪ್ರವೇಶ ಕಲ್ಪಿಸಲಾಗುವುದು.**
- ಶಿಕ್ಷಣ ಇಲಾಖೆಯಿಂದ ವರ್ಗಾವಣೆಗೊಂಡ 28 ವಸತಿ ಶಾಲೆಗಳಲ್ಲಿ ಸಾಮಾನ್ಯ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ ಶೇ 50% ರಷ್ಟು ಸ್ಥಾನಗಳನ್ನು ಹಂಚಿಕೆ ಮಾಡುವುದು. ಸಾಮಾನ್ಯ ವರ್ಗದ ಸ್ಥಾನಗಳಿಗೆ ಆದಾಯ ಪರಿಮಿತಿ ಇಲ್ಲದೆ ಎಲ್ಲಾ ವರ್ಗದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

## 5. ವಿಶೇಷ ವರ್ಗಗಳಿಗೆ ಸ್ಥಾನ ಹಂಚಿಕೆ:

| ಕ್ರ.ಸಂ | ವರ್ಗ | ಹಂಚಿಕೆ | 50 ಸಂಖ್ಯೆ | 60 ಸಂಖ್ಯೆ | 80 ಸಂಖ್ಯೆ |
|---|---|---|---|---|---|
| 1. | ಆಶ್ರಮ ಶಾಲೆ | ಶೇ 10 | 5 | 6 | 8 |
| 2. | ಅಲೆಮಾರಿ–ಅರೆ ಅಲೆಮಾರಿ, ಸೂಕ್ಷ್ಮ–ಅತಿ ಸೂಕ್ಷ್ಮ | ಶೇ 10 | 5 | 6 | 8 |
| 3. | ಅಂಗವಿಕಲ | ಶೇ 4 | 2 | 2 | 3 |
| 4. | ಮಾಜಿ ಸೈನಿಕ | ಶೇ 4 | 2 | 2 | 3 |
| 5. | ದುರ್ಬಲ ವರ್ಗ | ಶೇ 5 | 3 | 4 | 5 |
| 6. | ಸಫಾಯಿ ಕರ್ಮಚಾರಿ | ಶೇ 5 | 2 | 3 | 3 |

- ವಿಶೇಷ ದುರ್ಬಲ ವರ್ಗದಡಿ ಅರ್ಜಿ ಸಲ್ಲಿಸುವ ಎಲ್ಲಾ ಅಭ್ಯರ್ಥಿಗಳು ಕಡ್ಡಾಯವಾಗಿ ಪ್ರವೇಶ ಪರೀಕ್ಷೆಗೆ ಅರ್ಜಿ ಸಲ್ಲಿಸಿ ಹಾಗೂ ಪರೀಕ್ಷೆಗೆ ಹಾಜರಾಗಬೇಕು.

## 6. ವಿಶೇಷ ವರ್ಗಗಳ ಅರ್ಥ

**6.1 ಆಶ್ರಮ ಶಾಲೆ ವಿದ್ಯಾರ್ಥಿ:** ಸಮಾಜ ಕಲ್ಯಾಣ ಇಲಾಖೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ **ಆಶ್ರಮ/ವಸತಿ ಶಾಲೆ**ಯಲ್ಲಿ ಕನಿಷ್ಠ ಒಂದು ವರ್ಷ ಅಧ್ಯಯನ ಮಾಡಿ ವಾರ್ಷಿಕ ಪರೀಕ್ಷೆ ಬರೆದು, ಉತ್ತೀರ್ಣನಾದ ವಿದ್ಯಾರ್ಥಿಯನ್ನು ಮಾತ್ರ "ಆಶ್ರಮಶಾಲೆ ವಿದ್ಯಾರ್ಥಿ" ಎಂದು ಪರಿಗಣಿಸಲಾಗುವುದು. ಸಂಬಂಧ ಪಟ್ಟ ವಸತಿ ಶಾಲೆಯ ಮುಖ್ಯೋಪಧ್ಯಾಯರಿಂದ ನೀಡಲಾದ 'ವ್ಯಾಸಂಗ ಪ್ರಮಾಣ' ಪತ್ರವನ್ನು ಪಡೆದು ದಾಖಲೆ ಪರಿಶೀಲನೆ ಸಂದರ್ಭದಲ್ಲಿ ಹಾಜರುಪಡಿಸುವುದು.

**6.2 ಅಲೆಮಾರಿ / ಅರೆ ಅಲೆಮಾರಿ ವಿದ್ಯಾರ್ಥಿಗಳು:** ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಗುರುತಿಸಲಾದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳಲ್ಲಿನ ಸೂಕ್ಷ್ಮ / ಅತಿ ಸೂಕ್ಷ್ಮ, ಅಲೆಮಾರಿ / ಅರೆ ಅಲೆಮಾರಿ ಜಾತಿಗೆ ಸೇರಿದ ವಿದ್ಯಾರ್ಥಿಗಳನ್ನು ಅಲೆಮಾರಿ / ಅರೆ ಅಲೆಮಾರಿ ವಿದ್ಯಾರ್ಥಿ ಎಂದು ಪರಿಗಣಿಸಲಾಗುವುದು.

ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ನಿಗದಿಪಡಿಸಲಾದ ನಮೂನೆಯಲ್ಲಿ ಜಾತಿ ಪ್ರಮಾಣ ಪತ್ರವನ್ನು ಪಡೆಯುವುದು.

**6.3 "ದೈಹಿಕ ಅಂಗವಿಕಲ ಅಭ್ಯರ್ಥಿ" ಅಥವಾ "ಅಂಗವಿಕಲ ವ್ಯಕ್ತಿ" ಎಂದರೆ:–**

ವೈದ್ಯಕೀಯ ಪ್ರಾಧಿಕಾರವು ಪ್ರಮಾಣೀಕರಿಸಿರುವಂತೆ ಶೇಕಡಾ ನಲವತ್ತಕ್ಕಿಂತ ಕಡಿಮೆಯಿಲ್ಲದಂತೆ ಈ ಮುಂದಿನ ಯಾವುದೇ ಒಂದು ದೋಷದಿಂದ ಬಳಲುತ್ತಿರುವ ವ್ಯಕ್ತಿ.

| | | | |
|---|---|---|---|
| 1 | ಮಂದ ದೃಷ್ಟಿ | 3 | ದುರ್ಬಲ ಶ್ರವಣಶಕ್ತಿ |
| 2 | ವಾಸಿಯಾಗಿರುವ ಕುಷ್ಠರೋಗ | 4 | ಚಲನಶಕ್ತಿ ಇಲ್ಲದಿರುವುದು |

**6.4 ಮಾಜಿ ಸೈನಿಕರಿಗೆ ಮೀಸಲಾತಿ:** ಭದ್ರತಾ ದಳ, ಸೇನಾ ಪಡೆಗಳಿಂದ ನಿಗಧಿಪಡಿಸಲ್ಪಟ್ಟ ಪ್ರಾಧಿಕಾರಿಯಿಂದ 'ಮಾಜಿ ಸೈನಿಕ' ಪ್ರಮಾಣ ಪತ್ರವನ್ನು ಪಡೆದಿರುವ ಪೋಷಕರ / ಪಾಲಕರ ಮಕ್ಕಳು 'ಮಾಜಿ ಸೈನಿಕ' ಮೀಸಲಾತಿ ಅಡಿ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

**6.5 ವಿಶೇಷ ದುರ್ಬಲ ವರ್ಗ:** ದೇವದಾಸಿ / ಹೆಚ್ಐವಿ ಪೀಡಿತರು / ತಂದೆ ಅಥವಾ ತಾಯಿ ಇಲ್ಲದ (ಏಕ ಪೋಷಕರ ಮಕ್ಕಳು) / ಅನಾಥ ಮತ್ತು ಬಾಲ ಕಾರ್ಮಿಕರ ಮಕ್ಕಳು, ಹಾಗೂ ಯೋಜನಾ ನಿರಾಶ್ರಿತರು ಸಂಬಂಧಪಟ್ಟ ಪ್ರಾಧಿಕಾರಿಗಳಿಂದ ವಿಶೇಷ ದುರ್ಬಲ ವರ್ಗಕ್ಕೆ ಸೇರಿಸಿದ ದೃಢೀಕೃತ ಪ್ರಮಾಣ ಪತ್ರ ಪಡೆದಿರಬೇಕು. ಈ ಮೇಲ್ಕಂಡ ವಿಶೇಷ ದುರ್ಬಲ ವರ್ಗಕ್ಕೆ ಧೃಢೀಕರಣ ಪತ್ರ ನೀಡಲು ಸರ್ಕಾರದಿಂದ ಅಧಿಕೃತವಾಗಿ ಯಾವುದೇ ಪ್ರಾಧಿಕಾರವನ್ನು ಘೋಷಿಸಿರದಿದ್ದರೆ, ಸಂಘದಿಂದ ಪ್ರಕಟಿಸಲಾಗಿರುವ ನಮೂನೆ–2ರಲ್ಲಿ ಕನಿಷ್ಟ ಗ್ರೂಪ್–ಬಿ ದರ್ಜೆಯ ಅಧಿಕಾರಿಯಿಂದ ಧೃಡೀಕರಿಸಲ್ಪಟ್ಟ ಪ್ರಮಾಣ ಪತ್ರ ಹಾಜರುಪಡಿಸುವುದು.

**ಸೂಚನೆ:–** ವಿಶೇಷ ದುರ್ಬಲ ವರ್ಗದ ಅಡಿ ವಿವಿಧ 06 ದುರ್ಬಲ ವರ್ಗಗಳಿಗೆ ಪ್ರವೇಶ ಅವಕಾಶ ಕಲ್ಪಿಸಲಾಗಿದೆ. 06 ದುರ್ಬಲ ವರ್ಗಗಳಲ್ಲಿ ಯಾವ ಅಭ್ಯರ್ಥಿ ಹೆಚ್ಚು ಅಂಕಗಳಿಸಿತ್ತಾರೋ ಅವರಿಗೆ ವಿಶೇಷ ದುರ್ಬಲ ವರ್ಗದ ಅಡಿ ಪ್ರವೇಶ ಅವಕಾಶ ಕಲ್ಪಿಸುವುದು. 06 ವರ್ಗಗಳ ನಡುವೆ ಒಳ ಆಂತರಿಕ ಮೀಸಲಾತಿಯನ್ನು ಅನುಸರಿಸಬಾರದು.

**6.6 ಸಫಾಯಿ ಕರ್ಮಚಾರಿ:** ಸರ್ಕಾರ ನಿಗದಿಪಡಿಸಿರುವ ನಿಯಮಾನುಸಾರವಾಗಿ ಸಂಬಂಧಪಟ್ಟ ಪಟ್ಟಣ ಪಂಚಾಯಿತಿ / ನಗರ ಸಭೆ/ ಮಹಾನಗರ ಪಾಲಿಕೆಯ, ಮುಖ್ಯ ಅಧಿಕಾರಿ / ಪೌರಾಯುಕ್ತರು / ಆಯುಕ್ತರಿಂದ ನಿಗದಿತ ನಮೂನೆಯಲ್ಲಿ ಸಫಾಯಿ ಕರ್ಮಚಾರಿ ಪ್ರಮಾಣ ಪತ್ರ ಪಡೆದಿರುವವರು.

**6.7 ರೈತರ ಆತ್ಮಹತ್ಯೆ:** ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬದ ವಿದ್ಯಾರ್ಥಿಗಳಿಗೆ ರಾಜ್ಯದ ಯಾವುದೇ ವಸತಿಶಾಲೆಯಲ್ಲಿ ಖಾಲಿ ಇರುವ ಸ್ಥಾನಕ್ಕೆ ನೇರವಾಗಿ ಪ್ರವೇಶ ಕಲ್ಪಿಸುವುದು. ಪ್ರವೇಶ ಪ್ರಕ್ರೀಯೆ ಮುಕ್ತಾಯಗೊಂಡ ತರುವಾಯ ಯಾವುದೇ ಸಂಧರ್ಭದಲ್ಲಿ ರೈತರ ಆತ್ಮಹತ್ಯೆಯಂತಹ ದುರಂತ ನಡೆದ ಕುಟುಂಬ ವಿದ್ಯಾರ್ಥಿಗೆ ಪ್ರವೇಶ ಅವಕಾಶ ಬಯಸಿ ಕೋರಿಕೆ ಬಂದರೆ, ಖಾಲಿ ಉಳಿದ ಸ್ಥಾನಕ್ಕೆ ಲಿಂಗ, ವರ್ಗ / ಆರ್ಥಿಕ ಮಿತಿಯನ್ನು ಪರಿಗಣಿಸದೆ ನೇರವಾಗಿ ಪ್ರವೇಶ ಅವಕಾಶ ಕಲ್ಪಿಸಲಾಗುವುದು.

**6.8 ಸ್ಥಳೀಯ ಅಭ್ಯರ್ಥಿ:** ಒಂದು ತಾಲ್ಲೂಕಿನ ವಸತಿ ಶಾಲೆಗಳಿಗೆ ಅದೇ ತಾಲ್ಲೂಕಿನ ಮೂಲ ನಿವಾಸಿಯಾದ ವಿದ್ಯಾರ್ಥಿಗಳಿಗೆ ಶೇ.25% ರಷ್ಟು ಸ್ಥಾನವನ್ನು ಹಂಚಿಕೆಮಾಡಲಾಗಿದೆ. 50 ಸಂಖ್ಯೆಯ ವಸತಿ ಶಾಲೆಗೆ 13 ಸ್ಥಾನಗಳನ್ನು, 60 ಸಂಖ್ಯೆಯ ವಸತಿ ಶಾಲೆಗೆ 15 ಸ್ಥಾನಗಳು ಹಾಗೂ 80 ಸಂಖ್ಯೆಯ ವಸತಿ ಶಾಲೆಗೆ 20 ಸ್ಥಾನಗಳನ್ನು ಸ್ಥಳೀಯ ಅಭ್ಯರ್ಥಿಗೆ ಮೀಸಲಿಡಲಾಗುವುದು. ಒಂದು ತಾಲ್ಲೂಕಿಗೆ ನಿಗದಿಪಡಿಸಿದ ಸಂಖ್ಯೆಯ "ಸ್ಥಳೀಯ ಅಭ್ಯರ್ಥಿ" ಗಳು ದೊರೆಯದಿದ್ದರೆ, ರಾಜ್ಯಮಟ್ಟದ ಕೌನ್ಸಿಲಿಂಗ್ ಮೂಲಕ ಖಾಲಿ ಸ್ಥಾನಗಳನ್ನು ಭರ್ತಿಮಾಡುವುದು. **ಸ್ಥಳೀಯ ಅಭ್ಯರ್ಥಿ ಎಂದು ರುಜುವಾತು ಪಡಿಸಲು SATS ನಲ್ಲಿ ಲಭ್ಯವಿರುವ ಸ್ಥಳೀಯ ಅಭ್ಯರ್ಥಿ ಮಾಹಿತಿ ಅಥವಾ ಆಧಾರ್ ಕಾರ್ಡ್ ಅಥವಾ ಜಾತಿ ಪ್ರಮಾಣ ಪತ್ರ ಅಥವಾ ಪಡಿತರ ಚೀಟಿ ಅಥವಾ ವಾಸಸ್ಥಳ ಪ್ರಮಾಣ ಪತ್ರ ಹೊಂದಿರಬೇಕು.**

## 7. ಜಾತಿ ಮತ್ತು ಆದಾಯ ಪ್ರಮಾಣ ಪತ್ರ.

| ವರ್ಗ | ಜಾತಿ | ಆದಾಯ |
|---|---|---|
| ಹಿಂದುಳಿದ ವರ್ಗ | ಹಿಂದುಳಿದ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ನಿಗಧಿತ ನಮೂನೆಯಲ್ಲಿ ಹೊಂದಿರಬೇಕು. | ಹಿಂದುಳಿದ ವರ್ಗಕ್ಕೆ ಸೇರಿದ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ.1,00,000/– ಮಿತಿಯೊಳ ಗಿರಬೇಕು. ಪ್ರ.ವರ್ಗ–1 ಕ್ಕೆ ಸೇರಿದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ.2,50,000/– ಮಿತಿಯೊಳಗಿರಬೇಕು. |
| ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ನಿಗಧಿತ ನಮೂನೆಯಲ್ಲಿ ಹೊಂದಿರಬೇಕು. | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಅಭ್ಯರ್ಥಿಯ ಕುಟುಂಬದ ವಾರ್ಷಿಕ ಆದಾಯ ರೂ.2,50,000/– ಮಿತಿಯೊಳಗಿರಬೇಕು. |

**8. ಅಭ್ಯರ್ಥಿ ಅರ್ಜಿ ಸಲ್ಲಿಸಲು ಇರಬೇಕಾದ ಅರ್ಹತೆಗಳು**

1. ವಿದ್ಯಾರ್ಥಿಯು 5ನೇ ತರಗತಿಯನ್ನು ಸರ್ಕಾರದಿಂದ ಅನುಮೋದಿಸಲ್ಪಟ್ಟ ಶಾಲೆಯಲ್ಲಿ ಅಧ್ಯಯನ ಮಾಡುತ್ತಿರಬೇಕು. ದಾಖಲೆ ಪರಿಶೀಲನೆ ಸಂದರ್ಭದಲ್ಲಿ 5ನೇ ತರಗತಿ ಉತ್ತೀರ್ಣರಾಗಿರುವ ಅಂಕಪಟ್ಟಿ ಹೊಂದಿರಬೇಕು.
2. ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
3. ಅಭ್ಯರ್ಥಿಯ 09 ರಿಂದ 13 ವಯೋಮಾನದವರಾಗಿರಬೇಕು. [ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಅಭ್ಯರ್ಥಿಯು ಕನಿಷ್ಠ 9 ವರ್ಷಗಳನ್ನು ಪೂರೈಸಿರಬೇಕು ಮತ್ತು 13 ವರ್ಷ ಮೀರಿರಬಾರದು]

**9. ಲಿಂಗ ಹಾಗೂ ಜಾತಿವಾರು ಖಾಲಿ ಉಳಿದ ಸ್ಥಾನಗಳ ಭರ್ತಿ ಮಾಡುವ ವಿಧಾನ**

1. ಬಾಲಕ ಸ್ಥಾನ ಖಾಲಿ ಉಳಿದರೆ, ಅದೇ ವರ್ಗದ ಬಾಲಕಿಯರಿಗೆ ಅವಕಾಶ.
2. ಬಾಲಕಿ ಸ್ಥಾನ ಖಾಲಿ ಉಳಿದರೆ, ಅದೇ ವರ್ಗದ ಬಾಲಕರಿಗೆ ಅವಕಾಶ.
3. ಪರಿಶಿಷ್ಟ ಜಾತಿಗೆ ಮೀಸಲಾದ ಸ್ಥಾನ ಖಾಲಿ ಉಳಿದರೆ ಕ್ರಮವಾಗಿ ಪರಿಶಿಷ್ಟ ವರ್ಗ, ಪ.ವರ್ಗ–1, 2ಎ, 2ಬಿ, 3ಎ, 3ಬಿ ಅಭ್ಯರ್ಥಿಗೆ ಅವಕಾಶ.
4. ಪರಿಶಿಷ್ಟ ವರ್ಗದ ಸ್ಥಾನ ಖಾಲಿ ಉಳಿದರೆ ಕ್ರಮವಾಗಿ ಪರಿಶಿಷ್ಟ ಜಾತಿ, ಪ.ವರ್ಗ–1, 2ಎ, 2ಬಿ, 3ಎ, 3ಬಿ ಅಭ್ಯರ್ಥಿಗೆ ಕ್ರಮವಾಗಿ ಅವಕಾಶ.
5. ಪ.ವರ್ಗ–1ರಲ್ಲಿ ಖಾಲಿ ಉಳಿದರೆ 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ, ಪ.ವರ್ಗದ ಅಭ್ಯರ್ಥಿಗೆ ಕ್ರಮವಾಗಿ ಅವಕಾಶ.
6. 2ಎ ವರ್ಗದಲ್ಲಿ ಖಾಲಿ ಉಳಿದರೆ ಕ್ರಮವಾಗಿ ಪ.ವರ್ಗ–1, 2ಬಿ, 3ಎ, 3ಬಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗೆ ಅವಕಾಶ.
7. ಪ.ವರ್ಗ, 2ಬಿ ಯಲ್ಲಿ ಖಾಲಿ ಉಳಿದರೆ, ಪ.ವರ್ಗ–1, 2ಎ. 2ಬಿ, 3ಬಿ, ಪರಿಶಿಷ್ಟ ಜಾತಿ, ಪ.ವರ್ಗದ ಅಭ್ಯರ್ಥಿಗೆ ಅವಕಾಶ.
8. 3ಎ ಯಲ್ಲಿ ಖಾಲಿ ಉಳಿದರೆ, ಕ್ರಮವಾಗಿ ಪ.ವರ್ಗ–1, 2ಎ. 2ಬಿ, 3ಬಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗೆ ಅವಕಾಶ.
9. 3ಬಿ ಯಲ್ಲಿ ಖಾಲಿ ಉಳಿದರೆ, ಪ.ವರ್ಗ–1, 2ಎ, 2ಬಿ, 3ಎ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗೆ ಕ್ರಮವಾಗಿ ಅವಕಾಶ.

**10. ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ವಿಧಾನ:**

2020–21 ನೇ ಸಾಲಿನಲ್ಲಿ 6ನೇ ತರಗತಿಗೆ ದಾಖಲಾತಿ ಬಯಸುವ ವಿದ್ಯಾರ್ಥಿಗಳ ಪೋಷಕರು ಈ ಕೆಳಕಂಡ ದಾಖಲಾತಿಗಳೊಂದಿಗೆ ಹತ್ತಿರದ ಯಾವುದಾದರೊಂದು ವಸತಿ ಶಾಲೆಗಳನ್ನು ಸಂಪರ್ಕಿಸಲು ಸೂಚಿಸಿದೆ. ಅಭ್ಯರ್ಥಿಯ ಮಾಹಿತಿಗಳಾದ ಹೆಸರು, ಜನ್ಮ ದಿನಾಂಕ, ಜಾತಿ, ಸ್ವಂತ ಜಿಲ್ಲೆ ಮತ್ತು ತಾಲ್ಲೂಕು ಹಾಗು ಇನ್ನಿತರೆ ಮಾಹಿತಿಗಳನ್ನು Student Achivement Tracking System (SATS) ತಂತ್ರಾಂಶದಿಂದ ಪಡೆಯಲಾಗುವುದು.

ಈ ಕೆಳಕಂಡ ದಾಖಲೆಗಳನ್ನು ಅಭ್ಯರ್ಥಿಯು ಅರ್ಜಿ ಸಲ್ಲಿಸುವ ಸಮಯದಲ್ಲಿ ಕಡ್ಡಾಯವಾಗಿ ತೆಗೆದುಕೊಂಡು ಹತ್ತಿರದ ಯಾವುದಾದರೊಂದು ವಸತಿ ಶಾಲೆಗೆ ಹೋಗಬೇಕು.

1. Student Achivement Tracking System (SATS) ಸಂಖ್ಯೆ
2. ಇತ್ತೀಚಿನ ಭಾವಚಿತ್ರ
3. ಮೀಸಲಾತಿಯ ಪ್ರಯೋಜನಗಳನ್ನು ಕೋರಿರುವ ಪಕ್ಷದಲ್ಲಿ:– ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಚಾಲ್ತಿಯಲ್ಲಿರುವ ಜಾತಿ/ ಜಾತಿ ಮತ್ತು ಆದಾಯ ಪ್ರಮಾಣಪತ್ರ
4. ಸ್ಥಳಿಯ ಅಭ್ಯರ್ಥಿ ಎಂದು ರುಜುವಾತು ಪಡಿಸಲು ಅಗತ್ಯವಾದ ಆಧಾರ ಕಾರ್ಡ್ / ರೇಷನ್ ಕಾರ್ಡ್ /ಸ್ಥಳೀಯ ಪ್ರಮಾಣ ಪತ್ರ
5. ವಿಶೇಷ ವರ್ಗಗಳಿಗೆ ಸಂಬಂಧಿಸಿದ ಪ್ರಮಾಣ ಪತ್ರಗಳು

**ಅರ್ಜಿ ಸಲ್ಲಿಸುವ ವಿವರಗಳು**

ಅರ್ಜಿ ಭರ್ತಿಮಾಡುವಾಗ ಅಭ್ಯರ್ಥಿಯ ವಿವರಗಳಾದ ಅಭ್ಯರ್ಥಿಯ ಹೆಸರು, ತಂದೆಯ ಹೆಸರು, ತಾಯಿಯ ಹೆಸರು, ಜನ್ಮ ದಿನಾಂಕ, ಜಾತಿ, ಸ್ವಂತ ಜಿಲ್ಲೆ ಮತ್ತು ತಾಲ್ಲೂಕು ಹಾಗು ಇನ್ನಿತರೆ ಮಾಹಿತಿಗಳನ್ನು Student Achivement Tracking System (SATS) ತಂತ್ರಾಂಶದಿಂದ SATS ಸಂಖ್ಯೆಯನ್ನು ನಮೂದಿಸಿ ಪಡೆಯಲಾಗುವುದು. ಯಾವುದಾದರೂ ಮಾಹಿತಿಯಲ್ಲಿ ದೋಷವಿದ್ದರೆ ವಿದ್ಯಾರ್ಥಿಯು ಪ್ರಸ್ತುತ ಓದುತ್ತಿರುವ 5ನೇ ಶಾಲೆಯ ಮುಖ್ಯ ಉಪಾಧ್ಯಾಯರನ್ನು ಸಂಪರ್ಕಿಸಿ ಮಾಹಿತಿಯನ್ನು ಸರಿಪಡಿಸಿಕೊಂಡು ಅನಂತರ ಅರ್ಜಿ ಸಲ್ಲಿಸುವುದು.

**ಗಮನಿಸಿ:** ಸೀಟು ಹಂಚಿಕೆಯು ಅಭ್ಯರ್ಥಿಯ ಲಿಂಗ, ಜಾತಿ ಮತ್ತು ಆದಾಯದ ಆಧಾರ ಮೇಲೆ ಹಾಗು ಇತರ ಮಾಹಿತಿಯ ಮೇಲೆ ಅವಲಂಬಿತವಾಗಿರುವುದರಿಂದ SATS ನಲ್ಲಿರುವ ಅಭ್ಯರ್ಥಿಯ ಎಲ್ಲಾ ಮಾಹಿತಿಗಳನ್ನು ತಪ್ಪದೇ ಪರಿಶೀಲಿಸಿಕೊಳ್ಳತಕ್ಕದ್ದು. ಅಗತ್ಯವಿದ್ದಲ್ಲಿ ಸದರಿ ಶಾಲೆಯಲ್ಲಿ ಮಾಹಿತಿಯನ್ನು ಸರಿಪಡಿಸತಕ್ಕದ್ದು.

1. ಅಭ್ಯರ್ಥಿಯು ತನ್ನ ಮೀಸಲಾತಿಯಡಿಯಲ್ಲಿ ಸೀಟು ಪಡೆಯಲು ಅರ್ಹತೆಗೊಳ್ಳಲು, ತಾನು ಯಾವ ಮೀಸಲಾತಿ ಅಡಿಯಲ್ಲಿ ಅರ್ಹನಿರುವನೋ ಅಂದರೆ, ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ಪ್ರವರ್ಗ–1 ಅಥವಾ ಇತರೆ ಹಿಂದುಳಿದ ವರ್ಗಕ್ಕೆ ಸಂಬಂಧಿಸಿದ RD ಸಂಖ್ಯೆಯನ್ನೊಳಗೊಂಡ ನಿಗದಿತ ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ಪ್ರತಿಯನ್ನು ಪಡೆದು ಸಲ್ಲಿಸತಕ್ಕದ್ದು.
2. ಅಭ್ಯರ್ಥಿಯು ವಿಶೇಷ ವರ್ಗಕ್ಕೆ ಸೇರಿದ ಅಭ್ಯರ್ಥಿ ಆಗಿದ್ದಲ್ಲಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರಗಳನ್ನು ಪಡೆದಿರತಕ್ಕದ್ದು.
3. ಅಭ್ಯರ್ಥಿಯು ಅರ್ಜಿ ಸಲ್ಲಿಸುವಾಗ ತನ್ನ ಪೋಷಕರ ಚಾಲ್ತಿಯಲ್ಲಿರುವ ಮೊಬೈಲ್ ಸಂಖ್ಯೆಯನ್ನು ತಪ್ಪದೇ ನಮೂದಿಸಬೇಕು.
4. ಅಭ್ಯರ್ಥಿಯು ತನ್ನ ಸ್ವಂತ ಜಿಲ್ಲೆಯಲ್ಲಿರುವ ಎಲ್ಲಾ ವಸತಿ ಶಾಲೆಗಳಿಗೆ ಪ್ರವೇಶ ಪಡೆಯಲು ಮೀಸಲಾತಿಗನುಗುಣವಾಗಿ ಅರ್ಹನಾಗಿರುತ್ತಾನೆ. ಸೀಟು ಹಂಚಿಕೆಯು ಜಿಲ್ಲಾ ಹಂತದಲ್ಲಿ ಆನ್‌ಲೈನ್ ಮುಖಾಂತರ ನಡೆಸುವುದರಿಂದ ವಸತಿ ಶಾಲೆಯಿಂದ ಅರ್ಜಿ ಸಲ್ಲಿಸುವಾಗ ಅಭ್ಯರ್ಥಿಯು ತನ್ನ ಸ್ವಂತ ಜಿಲ್ಲೆಯಲ್ಲಿರುವ ಯಾವ ವಸತಿ ಶಾಲೆಗಳಲ್ಲಿ ಪ್ರವೇಶ ಬಯಸುತ್ತಾನೊ/ಳೊ ಅಂತಹ ವಸತಿ ಶಾಲೆಗಳಿಗೆ ಆದ್ಯತೆ ಅನುಸಾರ ತನ್ನ ಇಚ್ಛೆ / ಆಯ್ಕೆಗಳನ್ನು ಕಡ್ಡಾಯವಾಗಿ ನೀಡತಕ್ಕದ್ದು.
5. ಅಭ್ಯರ್ಥಿಯು ವಸತಿ ಶಾಲೆಯ ಪ್ರವೇಶಕ್ಕಾಗಿ ಶಾಲೆಯ ಆದ್ಯತೆಗಳನ್ನು ನೀಡುವ ಸಲುವಾಗಿ ಅರ್ಜಿ ಸಲ್ಲಿಸುವ ಶಾಲೆಯಿಂದ "ಶಾಲಾ ಆದ್ಯತೆ ವಿವರವನ್ನು ಸಲ್ಲಿಸುವ ಪ್ರತಿ" ಯನ್ನು ಪಡೆದು ಆದ್ಯತೆಗಳನ್ನು ಬರೆದು ಅಭ್ಯರ್ಥಿಯ ಹಾಗು ಪೋಷಕರ ಸಹಿಯೊಂದಿಗೆ ವಸತಿ ಶಾಲೆಯ ಮುಖ್ಯಸ್ಥರಿಗೆ ನೀಡಬೇಕು.
6. ಅರ್ಜಿಯನ್ನು ವಸತಿ ಶಾಲೆಯಲ್ಲಿ ಸಲ್ಲಿಸಿದ ನಂತರ ಅದೇ ಶಾಲೆಯಿಂದ ಸ್ವೀಕೃತಿಯನ್ನು ಅಥವಾ ಅರ್ಜಿಯ ಪ್ರತಿಯನ್ನು ಪಡೆದು ಆಯ್ಕೆ ಪ್ರಕ್ರಿಯೆಯ ಎಲ್ಲಾ ಹಂತದವರೆವಿಗೂ ತನ್ನ ಬಳಿ ಇರಿಸಿಕೊಳ್ಳತಕ್ಕದ್ದು.

**ಸೂಚನೆ:** ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ / ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಸಂಘದ ಅಡಿ ಕಾರ್ಯನಿರ್ವಹಿಸುತ್ತಿರುವ ಹತ್ತಿರ ವಸತಿ ಶಾಲೆಗಳನ್ನು / ಕಾಲೇಜುಗಳನ್ನು ಸಂಪರ್ಕಿಸುವುದು.

## 11. ಪ್ರವೇಶ ಪರೀಕ್ಷೆ ವಿಧಾನ

2020–21ನೇ ಸಾಲಿನ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳ 6ನೇ ತರಗತಿ ಪ್ರವೇಶ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಿರ್ವಹಿಸಲಿದ್ದು, ಪರೀಕ್ಷೆಯ ವೇಳಪಟ್ಟಿ ಈ ಕೆಳಕಂಡಂತಿದೆ.

| ದಿನಾಂಕ | ದಿನ | ಸಮಯ | ಒಟ್ಟು ಅಂಕಗಳು |
|---|---|---|---|
| 06–05–2020 | ಬುಧವಾರ | ಬೆ.11.00 ರಿಂದ ಮ.1.00 | 100 |

ಪರೀಕ್ಷೆಯನ್ನು ರಾಜ್ಯ ಮಟ್ಟದಲ್ಲಿ ಏಕಕಾಲಕ್ಕೆ ನಡೆಸಲಾಗುವುದು, ಅಭ್ಯರ್ಥಿಯು ಅರ್ಜಿ ಸಲ್ಲಿಸುವಾಗ ನಮೂದಿಸಿದ ತಾಲ್ಲೂಕಿನ / ಜಿಲ್ಲೆಯ ಪರೀಕ್ಷಾ ಕೇಂದ್ರದಲ್ಲಿಯೇ ಪರೀಕ್ಷೆಯನ್ನು ಬರೆಯಲು ಅವಕಾಶ ಕಲ್ಪಿಸಲಾಗಿದೆ.

ಅಭ್ಯರ್ಥಿಗಳು ಪರೀಕ್ಷೆಯ ಪ್ರವೇಶ ಪತ್ರವನ್ನು (Hall Ticket) ತಾವು ಅರ್ಜಿ ಸಲ್ಲಿಸಿದ ವಸತಿ ಶಾಲೆಯ ಪ್ರಾಂಶುಪಾಲರ ಮುಖಾಂತರ ಪಡೆದು, ಪ್ರವೇಶ ಪತ್ರದಲ್ಲಿ ನೀಡಿರುವ ಸೂಚನೆಗಳನ್ನು ಜಾಗರೂಕತೆಯಿಂದ ಓದಿಕೊಂಡು ನಿಗದಿತ ದಿನಾಂಕ ಮತ್ತು ಸಮಯಕ್ಕೆ ಸರಿಯಾಗಿ ಸಂಬಂಧಿಸಿದ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆಯನ್ನು ತೆಗೆದುಕೊಳ್ಳಲು ಸೂಚಿಸಿದೆ.

## 12. ಪ್ರವೇಶ ಪರೀಕ್ಷೆಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿ

### 12.1 – ಪರೀಕ್ಷೆಯ ವಿವರಗಳು

1. 6ನೇ ತರಗತಿಗೆ ಪ್ರವೇಶ ಬಯಸುವ ಎಲ್ಲಾ ಜಾತಿಯ ಹಾಗೂ ವಿಶೇಷ ವರ್ಗದ ಅಭ್ಯರ್ಥಿಗಳು ಕಡ್ಡಾಯವಾಗಿ ಪ್ರವೇಶ ಪರೀಕ್ಷೆಯನ್ನು ಬರೆಯಬೇಕು.
2. ಪ್ರಶ್ನೆ ಪತ್ರಿಕೆ ಕನ್ನಡ ಹಾಗೂ ಇಂಗ್ಲೀಷ್ ಎರಡು ಭಾಷೆಯಲ್ಲಿರುತ್ತದೆ.
3. ಪ್ರವೇಶ ಪರೀಕ್ಷೆಯ ಪ್ರಶ್ನೆ ಪತ್ರಿಕೆ 100 ಅಂಕದ ಬಹು ಆಯ್ಕೆ ಮಾದರಿಯಲ್ಲಿರುತ್ತದೆ.
4. ಪ್ರವೇಶ ಪರೀಕ್ಷೆಯ ಪಠ್ಯಕ್ರಮವು ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| ಕನ್ನಡ | 20 ಪ್ರಶ್ನೆ | 20 ಅಂಕ |
| ಇಂಗ್ಲೀಷ್ | 20 ಪ್ರಶ್ನೆ | 20 ಅಂಕ |
| ಗಣಿತ | 20 ಪ್ರಶ್ನೆ | 20 ಅಂಕ |
| ಸಮಾಜ ವಿಜ್ಞಾನ | 20 ಪ್ರಶ್ನೆ | 20 ಅಂಕ |
| ಸಾಮಾನ್ಯ ವಿಜ್ಞಾನ | 20 ಪ್ರಶ್ನೆ | 20 ಅಂಕ |
| **ಒಟ್ಟು** | **100 ಪ್ರಶ್ನೆ** | **100 ಅಂಕ** |

5. 100 ಅಂಕದ 100 ಪ್ರಶ್ನೆಗಳಿಗೆ ಉತ್ತರಿಸಲು 120 ನಿಮಿಷದ ಸಮಯವಕಾಶ ಇರುತ್ತದೆ.
6. ವಸತಿ ಶಾಲೆಯ ಆಯ್ಕೆಗೆ, ವಿದ್ಯಾರ್ಥಿಯ ಪ್ರವೇಶ ಪರೀಕ್ಷೆಯಲ್ಲಿ ಗಳಿಸಿದ ಅಂಕವನ್ನು ಮಾತ್ರ ಮಾನದಂಡವಾಗಿ ಪರಿಗಣಿಸಲಾಗುವುದು.
7. ಶೇ 90% ರಷ್ಟು ಪ್ರಶ್ನೆಗಳು 4 ಮತ್ತು 5ನೇ ತರಗತಿಯ ಪಠ್ಯಾಧಾರಿತವಾಗಿರುತ್ತದೆ.

ಮಾದರಿ ಪ್ರಶ್ನೆ ಪತ್ರಿಕೆಯ ಪ್ರತಿಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ಮತ್ತು ವಸತಿ ಸಂಘದ ವೆಬ್‌ಸೈಟ್ http://kreis.kar.nic.in ನಲ್ಲಿ ಪ್ರಕಟಿಸಿದೆ.

## 12.2. ಒಎಂಆರ್ ಉತ್ತರದ ಹಾಳೆಗಳು

ಪ್ರತಿಯೊಂದು ಪ್ರಶ್ನೆಪತ್ರಿಕೆಯೂ ಬಹು ಆಯ್ಕೆಯ ಪ್ರಶ್ನೆಗಳ (ವಸ್ತುನಿಷ್ಠ) ಸ್ವರೂಪದ್ದಾಗಿರುತ್ತದೆ. ಪ್ರಶ್ನೆ ಪತ್ರಿಕೆಯು ಬೇರೆ ಬೇರೆ ವರ್ಷನ್‌ಗಳು ಇರುತ್ತವೆ. ಪ್ರತಿಯೊಂದು ಪ್ರಶ್ನೆಯು ನಾಲ್ಕು ಬೇರೆ ಬೇರೆ ಆಯ್ಕೆಗಳನ್ನು ಹೊಂದಿರುತ್ತದೆ. ಪ್ರತಿಯೊಂದು ಪ್ರಶ್ನೆಗೆ **ಒಂದು** ಅಂಕವನ್ನು ನಿಗದಿ ಪಡಿಸಲಾಗಿರುತ್ತದೆ. **ತಪ್ಪು / ಸರಿಯಲ್ಲದ ಉತ್ತರಗಳಿಗೆ ಯಾವುದೇ ಋಣಾತ್ಮಕ ಮೌಲ್ಯಮಾಪನ ಇರುವುದಿಲ್ಲ. ಆದರೆ, ಒಂದೇ ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ಉತ್ತರಗಳನ್ನು ಗುರುತು ಹಾಕಿದ್ದಲ್ಲಿ, ಅಂಥ ಉತ್ತರಕ್ಕೆ ಯಾವುದೇ ಅಂಕವನ್ನು ನೀಡುವುದಿಲ್ಲ.** ಪ್ರಶ್ನೆಪತ್ರಿಕೆಯ ಆವೃತ್ತಿಯ ಸಂಕೇತವನ್ನು ಪ್ರಶ್ನೆ ಪತ್ರಿಕೆಯ ಮುಖಪುಟದ ಮೇಲೆ ದಪ್ಪನಾಗಿ ಮುದ್ರಿಸಲಾಗಿರುತ್ತದೆ.

## 12.3. ಉತ್ತರದ ಹಾಳೆಗಳಾಗಿ ಆಪ್ಟಿಕಲ್ ಮಾರ್ಕ್‌ರೀಡರ್(OMR) ಹಾಳೆಗಳ ಬಳಕೆ

ವಿದ್ಯಾರ್ಥಿಗಳು, ಉತ್ತರಗಳನ್ನು ಗುರುತು ಹಾಕುವುದಕ್ಕಾಗಿ ಉಪಯೋಗಿಸಲಾಗುವ ಆಪ್ಟಿಕಲ್ ಮಾರ್ಕ್‌ರೀಡರ್ (ಒಎಂಆರ್) ಹಾಳೆಗಳ ಮಾದರಿಯನ್ನು ಕ.ಪ.ಪ್ರಾ.ದ ವೆಬ್‌ಸೈಟ್ http://kea.kar.nic.in ಮತ್ತು ವಸತಿ ಸಂಘದ http://kreis.kar.nic.in ವೆಬ್‌ಸೈಟ್ ನಲ್ಲಿ ಪ್ರಕಟಿಸಲಾಗುವುದು. ಉತ್ತರ ಪತ್ರಿಕೆಯ ಪಡಿಯಚ್ಚು ಪ್ರತಿ ಇರುವಂತೆ ಉತ್ತರ ಪತ್ರಿಕೆಯನ್ನು ರೂಪಿಸಬೇಕಾದ ಅಗತ್ಯವಿದ್ದುದರಿಂದ, ಒಂದೇ ಬದಿಯಲ್ಲಿ ಎಲ್ಲಾ ಮಾಹಿತಿ ಇರುವಂತೆ ಮತ್ತು ಉತ್ತರಗಳನ್ನು ಸಹ ಅದೇ ಬದಿಯಲ್ಲಿ ಗುರುತು ಮಾಡುವಂತೆ ಒಎಂಆರ್ ಹಾಳೆಯನ್ನು ವಿನ್ಯಾಸಗೊಳಿಸಲಾಗಿದೆ.

ಈ ಹಾಳೆಯ ಮೇಲ್ಭಾಗವನ್ನು ವಿದ್ಯಾರ್ಥಿಯ ಹೆಸರು, ನೊಂದಣಿ ಸಂಖ್ಯೆ, ಪ್ರಶ್ನೆ ಪುಸ್ತಿಕೆಯ ಆವೃತ್ತಿ ಸಂಖ್ಯೆ ಮತ್ತು ಕ್ರಮ ಸಂಖ್ಯೆಯನ್ನು ತುಂಬುವ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಕೆಳಭಾಗವನ್ನು, ಉತ್ತರಗಳನ್ನು ಗುರುತು ಹಾಕುವುದಕ್ಕೆ, ಕೊಠಡಿ ಮೇಲ್ವಿಚಾರಕರು ಮತ್ತು ವಿದ್ಯಾರ್ಥಿಗಳು ತಮ್ಮ ಸಹಿ ಹಾಕುವುದಕ್ಕೆ ರೂಪಿಸಲಾಗಿದೆ. ವಿಷಯಕ್ಕೆ ಸಂಬಂಧಿಸಿದ ಸ್ಥಳದಲ್ಲಿ ವಿವರವನ್ನು ಮುಂಚಿತವಾಗಿಯೇ ಮುದ್ರಿಸಲಾಗಿರುತ್ತದೆ. ಪ್ರತಿಯೊಂದು ಬಾಬ್ತಿಗೆ ಸಂಬಂಧಿಸಿದಂತೆ ಇರುವ ಚೌಕಾಕಾರದ ಖಾಲಿ ಮನೆಗಳನ್ನು ವಿದ್ಯಾರ್ಥಿಯು ದೊಡ್ಡ ಅಕ್ಷರಗಳಲ್ಲಿ ಮತ್ತು ಸಂಖ್ಯೆಗಳಲ್ಲಿ ತುಂಬಬೇಕು. ಅಕ್ಷರಗಳು ಅಥವಾ ಸಂಖ್ಯೆಗಳಿಗೆ ಸಂಬಂಧಿಸಿದಂತೆ ಇರುವ ವೃತ್ತಗಳನ್ನು, ಕೇವಲ ನೀಲಿ ಅಥವಾ ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್ನಿನಿಂದ ಮಾತ್ರವೇ ಸಂಪೂರ್ಣವಾಗಿತುಂಬಬೇಕು.

## 12.4 ಒ.ಎಂ.ಆರ್. ಉತ್ತರದ ಹಾಳೆಯ ಮಾದರಿ ಪ್ರತಿ

ಒಎಂಆರ್ ಉತ್ತರದ ಹಾಳೆಯ ಒಂದು ಮಾದರಿ ಪ್ರತಿಯನ್ನು ಕ.ಪ.ಪ್ರಾ.ದ ವೆಬ್‌ಸೈಟ್ http://kea.kar.nic.in ಮತ್ತು ವಸತಿ ಸಂಘದ http://kreis.kar.nic.in ನಲ್ಲಿ ಪ್ರಕಟಿಸಲಾಗುವುದು. ಅದನ್ನು ಡೌನ್‌ಲೋಡ್ ಮಾಡಿಕೊಂಡು ಅದರ ಬಗೆಗೆ ಸರಿಯಾದ ತಿಳುವಳಿಕೆಯನ್ನು ಪಡೆದುಕೊಳ್ಳಿ. ಒಎಂಆರ್ ಮಾದರಿ ಪ್ರತಿಯ ನಾಲ್ಕೈದು ಜೆರಾಕ್ಸ್ ಪ್ರತಿಗಳನ್ನು ಮಾಡಿಕೊಂಡು, ಮನೆಯಲ್ಲಿ ಅವುಗಳ ಮೇಲೆ ಉತ್ತರ ತುಂಬುವ ಅಭ್ಯಾಸ ಮಾಡಿ. ವಿದ್ಯಾರ್ಥಿಗಳು, ನೀಲಿ ಅಥವಾ ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್ನನ್ನು ಅಗತ್ಯವಿರುವ ಬಾಬ್ತುಗಳನ್ನು

ತುಂಬುವುದಕ್ಕೆ ಮತ್ತು ಗುರುತು ಮಾಡುವುದಕ್ಕೆ ಸಂಬಂಧಿಸಿದಂತೆ ಬಳಸುವ ಮೂಲಕ ಅಭ್ಯಾಸ ಮಾಡಬಹುದು. ಹೀಗೆ ಮಾಡುವುದರಿಂದ ನೀವು, ಪರೀಕ್ಷೆಯನ್ನು ನಿಜವಾಗಿ ಬರೆಯುವ ಸಮಯದಲ್ಲಿ, ಮೂಲ ಒಎಂಆರ್ ಉತ್ತರದ ಹಾಳೆಯಲ್ಲಿ ಹೇಗೆ ಸರಿಯಾದ ರೀತಿಯಲ್ಲಿ ವಿವರಗಳನ್ನು ತುಂಬಬೇಕಿರುವುದೋ ಅದೇ ರೀತಿಯಲ್ಲಿಯೇ ಹೆಸರು, ನೊಂದಣಿ ಸಂಖ್ಯೆ, ಪ್ರಶ್ನೆ ಪುಸ್ತಿಕೆ ಆವೃತ್ತಿ ಸಂಕೇತ, ಮೊದಲಾದ ವಿವರಗಳನ್ನು ಬರೆಯುವ ಮತ್ತು ತುಂಬುವ ವಿಷಯದಲ್ಲಿ ಹೆಚ್ಚಿನ ನಿಖರತೆ ಪಡೆದುಕೊಳ್ಳುವಿರಿ.

ಒಎಂಆರ್ ಉತ್ತರದ ಹಾಳೆಯ ಮೇಲೆ ವಿವರಗಳನ್ನು ತುಂಬುವಾಗ ವಹಿಸಬೇಕಾದ ಮುನ್ನೆಚ್ಚರಿಕೆಗಳ ಕುರಿತು ಹೆಚ್ಚಿನ ವಿವರಗಳನ್ನು ಈ ಮುಂದೆ ನೀಡಲಾಗಿದೆ:

(i) ಒಎಂಆರ್ ಉತ್ತರದ ಹಾಳೆಯು, ಎರಡು ಹಾಳೆಗಳನ್ನು ಒಳಗೊಂಡಿರುತ್ತದೆ.

(ii) ಒಎಂಆರ್ ಉತ್ತರದ ಮೇಲ್ಭಾಗದ ಹಾಳೆಯನ್ನು ಸರಿಯಾದ ಉತ್ತರಗಳನ್ನು ಗುರುತು ಹಾಕುವುದಕ್ಕೆ ಮತ್ತು ಆನಂತರ ಅದನ್ನು ಸ್ಕ್ಯಾನ್ ಹಾಗೂ ಮೌಲ್ಯಮಾಪನ ಮಾಡುವುದಕ್ಕೆ ಬಳಸಲಾಗುವುದು. ಕೆಳಭಾಗದ ಹಾಳೆಯನ್ನು, ಪರೀಕ್ಷೆಯ ಪ್ರತಿಯೊಂದು ಅವಧಿ ಮುಗಿದ ನಂತರ ವಿದ್ಯಾರ್ಥಿಗೆ ಕೊಡಲಾಗುವುದು. ಕೆಳಭಾಗದ ಹಾಳೆಗೆ ಒಂದು ವಿಶೇಷ ಬಗೆಯ ರಾಸಾಯನಿಕ ವಸ್ತುವನ್ನು ಬಳಿಯಲಾಗಿದ್ದು, ಅದು ಕಾರ್ಬನ್ ಪೇಪರ್ ರೀತಿ ಕೆಲಸ ಮಾಡುತ್ತದೆ. ವಿದ್ಯಾರ್ಥಿಯು, ಮೇಲ್ಭಾಗದ ಹಾಳೆಯ ಮೇಲೆ ವೃತ್ತಗಳನ್ನು ತುಂಬಿದಾಗ, ಕೆಳಭಾಗದ ಹಾಳೆಯ ಮೇಲೆ ಬೀಳುವ ಒತ್ತಡವು, ಸಹಜವಾಗಿಯೇ ಅದರ ಮೇಲೆ ಮೇಲ್ಭಾಗದ ಹಾಳೆಯ ಪಡಿಯಚ್ಚನ್ನು ಸೃಷ್ಟಿಸುತ್ತದೆ.

## 12.5 ಬಾಲ್ ಪಾಯಿಂಟ್ ಪೆನ್ನನ್ನೇ ಏಕೆ ಬಳಸಬೇಕು?

ವಿದ್ಯಾರ್ಥಿಗಳು, ಒಎಂಆರ್ ಉತ್ತರದ ಹಾಳೆಯ ಪಡಿಯಚ್ಚು ಅಥವಾ ಯಥಾಪ್ರತಿಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗುವುದಕ್ಕೆ ಅವಕಾಶ ನೀಡಲಾಗಿದೆ ಮತ್ತು ಒಎಂಆರ್ ಉತ್ತರ ಪತ್ರಿಕೆಯು ಎರಡು ಹಾಳೆಗಳ ಒಂದು ಸೆಟ್‌ಆಗಿರುತ್ತದೆ ಎನ್ನುವುದು ನಿಮ್ಮ ನೆನಪಿನಲ್ಲಿರಲಿ. ಮೇಲಿನ ಹಾಳೆಯಲ್ಲಿರುವ ವೃತ್ತದ ಮೇಲೆ ನೀವು ಷೇಡ್ ಮಾಡಿದಾಗ, ಅದರಿಂದ ಬೀಳುವ ಒತ್ತಡದಿಂದಾಗಿ, ಕೆಳಗಿನ ಹಾಳೆಯಲ್ಲಿರುವ ಅದೇ ವೃತ್ತದಲ್ಲಿ ಕಪ್ಪು ಬಣ್ಣದಗುರುತು ಮೂಡುತ್ತದೆ. ನಿಬ್‌ಪೆನ್ನನ್ನು ಬಳಸಿದರೆ, ಮೇಲಿನ ಹಾಳೆಯ ಮೇಲೆ ಬೀಳುವ ಒತ್ತಡದ ಪ್ರಮಾಣವು ಕೆಳಗಿನ ಹಾಳೆಯ ಮೇಲಿರುವ ರಾಸಾಯನಿಕವನ್ನು ಪಟು (ಆಕ್ಟಿವ್) ಗೊಳಿಸುವುದಕ್ಕೆ ಸಾಕಾಗುವುದಿಲ್ಲ. ಇದಕ್ಕೆ ಬದಲಾಗಿ, **ಬಾಲ್‌ಪಾಯಿಂಟ್ ಪೆನ್**ಅನ್ನು ಬಳಸಿದಾಗ, ಅದು ಕೆಳಗಿನ ಹಾಳೆಯಲ್ಲಿರುವ ರಾಸಾಯನಿಕವನ್ನುಕಪ್ಪು ಬಣ್ಣದ ಗುರುತಾಗಿ ಬದಲಾಯಿಸುವುದಕ್ಕೆ ಬೇಕಿರುವಷ್ಟು ಒತ್ತಡವನ್ನು ಹಾಕುತ್ತದೆ. ಈ ಕಾರಣಕ್ಕಾಗಿಯೇ, ನೀವು ನೀಲಿ/ಕಪ್ಪು ಶಾಯಿಯ **ಬಾಲ್ ಪಾಯಿಂಟ್ ಪೆನ್** ಅನ್ನು ಮಾತ್ರ ಬಳಸಬೇಕು ಎನ್ನುವುದು ನಮ್ಮ ಅಪೇಕ್ಷೆಯಾಗಿದೆ.

## 12.6 ಒಎಂಆರ್ ಉತ್ತರದ ಹಾಳೆಯ ಮೇಲ್ಭಾಗದಲ್ಲಿ ಬರೆಯುವಾಗ / ಷೇಡ್ ಮಾಡುವಾಗ ವಹಿಸಬೇಕಾದ ಪ್ರಮುಖ ಮುನ್ನೆಚ್ಚರಿಕೆಗಳು:

### (ಎ) ಆರಂಭದ 10 ನಿಮಿಷಗಳು:

ಪರೀಕ್ಷೆಯ ಅವಧಿಯ ಮೊದಲ ಹತ್ತು ನಿಮಿಷಗಳನ್ನು, ಒಎಂಆರ್ ಉತ್ತರ ಹಾಳೆಗಳ ಮೇಲ್ಭಾಗದಲ್ಲಿ ಕೊಟ್ಟಿರುವ ಅಂಕಣಗಳಲ್ಲಿ ವಿದ್ಯಾರ್ಥಿಗಳು ತಮ್ಮ ಹೆಸರು, ನೊಂದಣಿ ಸಂಖ್ಯೆ, ಪ್ರಶ್ನೆ ಪುಸ್ತಿಕೆಯ ಆವೃತ್ತಿ ಸಂಕೇತ ಮತ್ತು ಕ್ರಮ ಸಂಖ್ಯೆಯಂಥ ವಿವರಗಳನ್ನು ಬರೆಯುವುದಕ್ಕಾಗಿ / ಷೇಡ್ ಮಾಡುವುದಕ್ಕಾಗಿ ನೀಡಲಾಗುವುದು. **ತಮ್ಮ ಸರಿಯಾದ ನೊಂದಣಿ ಸಂಖ್ಯೆ ಮತ್ತು ವರ್ಷನ್ ಕೋಡ್ ಅನ್ನು ಬರೆಯದಿರುವ / ಷೇಡ್ ಮಾಡದಿರುವ ವಿದ್ಯಾರ್ಥಿಗಳ ಒಎಂಆರ್ ಉತ್ತರ ಹಾಳೆಗಳನ್ನು ಸ್ಕ್ಯಾನ್ ಮಾಡಲಾಗುವುದಿಲ್ಲ ಹಾಗೂ ಅಂಥ ವಿದ್ಯಾರ್ಥಿಗಳಿಗೆ ಯಾವುದೇ ರ್‍ಯಾಂಕನ್ನು ನೀಡಲಾಗುವುದಿಲ್ಲ. ಹೆಸರು, ನೊಂದಣಿ ಸಂಖ್ಯೆ ಮತ್ತು ಪ್ರಶ್ನೆ ಪುಸ್ತಿಕೆಯ ವರ್ಷನ್‌ಕೋಡ್‌ಗೆ ಸಂಬಂಧಪಟ್ಟ ನಮೂದುಗಳು ಅತ್ಯಂತ ನಿರ್ಣಾಯಕವಾದವುಗಳಾಗಿವೆ.** ಆದ್ದರಿಂದ, **ಒಎಂಆರ್** ಉತ್ತರದ ಹಾಳೆಯ ಮೇಲ್ಭಾಗದಲ್ಲಿ ಈ ಮೂರು ಬಾಬ್ತುಗಳನ್ನು ಬರೆಯುವಾಗ ಮತ್ತು ಷೇಡ್ ಮಾಡುವಾಗ ವಿದ್ಯಾರ್ಥಿಗಳು ಹೆಚ್ಚಿನ ಮುನ್ನೆಚ್ಚರಿಕೆ ವಹಿಸಬೇಕೆಂದು ಸಲಹೆ ನೀಡಲಾಗಿದೆ.

ವಿದ್ಯಾರ್ಥಿಗಳು ಪರೀಕ್ಷೆಯ ಅವಧಿಯ ಆರಂಭದಲ್ಲಿ ನೀಡಲಾಗುವ ಆಪ್ಟಿಕಲ್ ಮಾರ್ಕ್‌ರೀಡರ್ **(ಒಎಂಆರ್)** ಉತ್ತರ ಹಾಳೆಯ ಮೇಲೆ, ಸರಿಯಾದ ಉತ್ತರಗಳನ್ನು ಗುರುತು ಮಾಡಬೇಕಿರುತ್ತದೆ. ಪ್ರತಿ ಪ್ರಶ್ನೆಯು, ಒಂದೇ ಒಂದು ಸರಿಯಾದ ಉತ್ತರವನ್ನು ಮಾತ್ರ ಹೊಂದಿರುತ್ತದೆ. ವಿದ್ಯಾರ್ಥಿಗಳು **ನೀಲಿ** ಅಥವಾ **ಕಪ್ಪು** ಶಾಯಿಯ ಬಾಲ್ ಪಾಯಿಂಟ್ ಪೆನ್ನನ್ನು ಮಾತ್ರ ಬಳಸಿ, ಪ್ರಶ್ನೆ ಸಂಖ್ಯೆಗೆ ಸಂಬಂಧಿಸಿದಂತೆ ನೀಡಿರುವ ವೃತ್ತಗಳಲ್ಲಿ ಒಂದು ವೃತ್ತವನ್ನು ಮಾತ್ರ ಪೂರ್ಣವಾಗಿ ಷೇಡ್ ಮಾಡುವ ಮೂಲಕ, ಸರಿಯಾದ ಉತ್ತರವನ್ನು ಗುರುತು ಮಾಡಬೇಕು.

ಒಂದುವೇಳೆ ಓ.ಎಮ್.ಆರ್ ನಲ್ಲಿ ಅಭ್ಯರ್ಥಿಯ ಮಾಹಿತಿಯು Preprinted ಆಗಿದ್ದರೆ ವಿದ್ಯಾರ್ಥಿಗಳು ಮಾಹಿತಿಯನ್ನು ತುಂಬುವ ಅವಶ್ಯಕತೆ ಇರುವುದಿಲ್ಲ.

### (ಬಿ) ನಂತರದ 120 ನಿಮಿಷಗಳು:

**ಒಎಂಆರ್ ಉತ್ತರ ಹಾಳೆಯ ಕೆಳಭಾಗದಲ್ಲಿ ಉತ್ತರಗಳನ್ನು ಷೇಡ್ ಮಾಡುವಾಗ ವಹಿಸಬೇಕಾದ ಪ್ರಮುಖ ಮುನ್ನೆಚ್ಚರಿಕೆಗಳು.**

ಆರಂಭದ ಹತ್ತು ನಿಮಿಷಗಳ ನಂತರ, ಒಎಂಆರ್‌ಉತ್ತರ ಹಾಳೆಯ ಕೆಳಭಾಗದಲ್ಲಿ ಉತ್ತರಗಳನ್ನು ಷೇಡ್ ಮಾಡುವುದಕ್ಕಾಗಿ, ವಿದ್ಯಾರ್ಥಿಗಳಿಗೆ 120 ನಿಮಿಷಗಳನ್ನು ನೀಡಲಾಗುವುದು. ಕೆಳಭಾಗದಲ್ಲಿ, 100 ಪ್ರಶ್ನೆಗಳಿಗೆ ಸರಿಹೊಂದುವಂತೆ 100 ಸಾಲುಗಳಿರುತ್ತವೆ. ಪ್ರಶ್ನೆ ಪತ್ರಿಕೆಯಲ್ಲಿರುವ ಉತ್ತರದ ನಾಲ್ಕು ಆಯ್ಕೆಗಳಿಗೆ ಸರಿಹೊಂದುವಂತೆ, ಪ್ರತಿ ಪ್ರಶ್ನೆ ಸಂಖ್ಯೆಯ ಎದುರಿಗೆ ನಾಲ್ಕು ವೃತ್ತಗಳನ್ನು ನೀಡಲಾಗಿರುತ್ತದೆ. ವಿದ್ಯಾರ್ಥಿಗಳು, ಅವುಗಳಲ್ಲಿ ಸರಿಯಾದ ಉತ್ತರಕ್ಕೆ ಸರಿ ಹೊಂದುವಂಥ ಒಂದೇ ಒಂದು ವೃತ್ತವನ್ನು ಮಾತ್ರ ಷೇಡ್ ಮಾಡಬೇಕಿರುತ್ತದೆ.

**ಕಪ್ಪು ಮತ್ತು ನೀಲಿ ಶಾಯಿಯ ಷೇಡ್‌ಗಳಿಗೆ ಸ್ಕ್ಯಾನರ್ ಎಷ್ಟರಮಟ್ಟಿಗೆ ಸೂಕ್ಷ್ಮ ಸಂವೇದಿ ಯಾಗಿರುತ್ತದೆ ಎಂದರೆ, ಒಎಂಆರ್‌ಉತ್ತರ ಹಾಳೆಯ ವೃತ್ತದೊಳಗೆ ಅಪ್ಪಿತಪ್ಪಿ ಮಾಡಿರುವ ಸಣ್ಣಪುಟ್ಟ ಶಾಯಿ ಗುರುತನ್ನು ಅಥವಾ ನಿರುದ್ದೇಶವಾಗಿ ಆಗಿರುವ ಶಾಯಿಯ ಚುಕ್ಕಿಯನ್ನು ಸಹ, ಸ್ಕ್ಯಾನಿಂಗ್ ಸಮಯದಲ್ಲಿ, ತುಂಬಿರುವ / ಷೇಡ್ ಮಾಡಿರುವಗುರುತು ಎಂದೇ ಪರಿಗಣಿಸುತ್ತದೆ. ಇದರಿಂದಾಗಿ, ವಿದ್ಯಾರ್ಥಿಯು ಅಂಕಗಳನ್ನು ಕಳೆದುಕೊಳ್ಳಬಹುದು. ಆದ್ದರಿಂದ,** ದಯವಿಟ್ಟು, ಒಎಂಆರ್ ಉತ್ತರ ಹಾಳೆಯ ಮೇಲೆ ಪೆನ್ನಿನಿಂದ ಯಾವುದೇ ವಿಧವಾದ ಅನಗತ್ಯ ಗುರುತುಗಳನ್ನು ಮಾಡಬೇಡಿ. ಸ್ಕ್ಯಾನರ್ ಮತ್ತು ಕಂಪ್ಯೂಟರ್ ಒಟ್ಟಾಗಿ ನೀಡಿದ ಅಂಕಗಳೇ ಅಂತಿಮವಾಗುವುದರಿಂದ, ವೃತ್ತದಲ್ಲಿ ಆದ ಶಾಯಿ ಗುರುತನ್ನು ಅಳಿಸುವುದಕ್ಕಾಗಿ ಅಥವಾ ಗಣನೆಗೆ ತೆಗೆದುಕೊಳ್ಳದಿರುವುದಕ್ಕಾಗಿ ಮಾಡುವಂಥ ಮನವಿಯನ್ನು ಒಪ್ಪಿಕೊಳ್ಳುವುದಿಲ್ಲ. ಆದ್ದರಿಂದ, ಕೆಳಭಾಗದಲ್ಲಿರುವ ವೃತ್ತಗಳನ್ನು ಷೇಡ್ ಮಾಡುವಾಗ ಹೆಚ್ಚಿನ ಮುನ್ನೆಚ್ಚರಿಕೆ ವಹಿಸುವಂತೆ ವಿದ್ಯಾರ್ಥಿಗಳಿಗೆ ಸಲಹೆ ನೀಡಲಾಗಿದೆ.


**(ಸಿ) ಪರೀಕ್ಷೆಯ ಅವಧಿಗೆ ಸಂಬಂಧಿಸಿದಂತೆ ಪತ್ರಿಕೆಯ ಮುಕ್ತಾಯ:**

ವಿದ್ಯಾರ್ಥಿಗಳು, ಪರೀಕ್ಷೆಯ ಅವಧಿಯು ಮುಗಿದ ನಂತರ, ಕೊಠಡಿ ಮೇಲ್ವಿಚಾರಕರು, ರಂಧ್ರಗಳನ್ನು ಹೊಂದಿರುವ (perforations) ಉತ್ತರದ ಹಾಳೆಯ ಸೆಟ್ಟಿನ ಮೇಲಿನ ಹಾಳೆಯಿಂದ ಕೆಳಗಿನ ಹಾಳೆಯನ್ನು ಬೇರ್ಪಡಿಸಿ, ಪಡಿಯಚ್ಚಿನ ಕೆಳಗಿನ ಹಾಳೆಯನ್ನು ವಿದ್ಯಾರ್ಥಿಗಳಿಗೆ ನೀಡುವರು. ಅದನ್ನು ವಿದ್ಯಾರ್ಥಿಗಳು ತಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು. ಮೇಲಿನ ಹಾಳೆಯನ್ನು ಪರೀಕ್ಷಾ ಕೇಂದ್ರದ ಉಪ ಮುಖ್ಯಅಧೀಕ್ಷಕರಿಗೆ ನೀಡುವ ಸಲುವಾಗಿ ಕೊಠಡಿ ಮೇಲ್ವಿಚಾರಕರು ತಮ್ಮ ಬಳಿ ಇಟ್ಟುಕೊಳ್ಳುವರು. ಇದನ್ನು ಆನಂತರ ಪರೀಕ್ಷಾ ಕೇಂದ್ರದ ಉಪಮುಖ್ಯಅಧೀಕ್ಷಕರು ಪ್ರಾಧಿಕಾರಕ್ಕೆ ನೀಡುವರು.

ವಿದ್ಯಾರ್ಥಿಗಳು, 'ಪ್ರವೇಶ ಪರೀಕ್ಷೆ-2020'ರ ಒಎಂಆರ್ ಉತ್ತರದ ಹಾಳೆಯ ಪಡಿಯಚ್ಚು ಪ್ರತಿಗಳನ್ನು ಜೋಪಾನವಾಗಿಟ್ಟುಕೊಳ್ಳಬೇಕು.

**ಸರಿಯಾಗಿ ಆಲೋಚಿಸಿದ ನಂತರ ಉತ್ತರವನ್ನು ಗುರುತು ಮಾಡಿ.**

ಪ್ರಶ್ನೆ ಪತ್ರಿಕೆಯಲ್ಲಿನ ಪ್ರಶ್ನೆಗೆ ಅನುಗುಣವಾಗಿರುವ ಸರಿ ಉತ್ತರವನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಅದೇ ಕ್ರಮ ಸಂಖ್ಯೆಯ ಮುಂದೆ ನೀಡಿರುವ ಸಂಬಂಧಿಸಿದ ವೃತ್ತವನ್ನು ನೀಲಿ ಅಥವಾ ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್‌ನಿಂದ ಸಂಪೂರ್ಣ ತುಂಬುವುದು.




ವೃತ್ತವನ್ನು ಒಮ್ಮೆ ಗುರುತು ಮಾಡಿದ ಮೇಲೆ, ಅದನ್ನು ಅಳಿಸುವುದಕ್ಕಾಗಲೀ ಅಥವಾ ತೆಗೆದು ಹಾಕುವುದಕ್ಕಾಗಲೀ ಯಾವುದೇ ರೀತಿಯಲ್ಲೂ ಸಾಧ್ಯವಿರುವುದಿಲ್ಲ. ಆದ್ದರಿಂದ, ಸರಿಯಾದ ಉತ್ತರ ಕುರಿತು ನೀವು ತೆಗೆದುಕೊಳ್ಳುವ ನಿರ್ಣಯವೇ ಅಂತಿಮವಾಗಿರುತ್ತದೆ. ನೀವು ಒಮ್ಮೆ ಗುರುತು ಮಾಡಿರುವುದನ್ನು ಕಾಣದಂತೆ ಮಾಡುವುದಕ್ಕಾಗಿ ಮಾರ್ಕರ್, ವೈಟ್ ಫ್ಲೂಯಿಡ್ ಅಥವಾ ಇತರ ಯಾವುದೇ ಸಾಧನವನ್ನು ಬಳಸುವುದಕ್ಕೆ ಮೇಲ್ವಿಚಾರಕರು ನಿಮಗೆ

ಅನುಮತಿಸುವುದಿಲ್ಲ. ಅಲ್ಲದೆ ನಿಮಗೆ ಮತ್ತೊಂದು ಒಎಂಆರ್ ಹಾಳೆಯನ್ನು ಕೊಡುವುದಿಲ್ಲ. ವೃತ್ತದ ಮೇಲೆ ಮಾಡಿದ ಗುರುತನ್ನು ಅಳಿಸುವ ನಿಮ್ಮ ಪ್ರಯತ್ನದಲ್ಲಿ ನೀವು ಹಾಳೆಯನ್ನು ಹಾಳುಮಾಡಿಕೊಂಡರೆ, ನಿಮ್ಮ ಅವಕಾಶಗಳನ್ನು ನೀವೇ ಹಾಳು ಮಾಡಿಕೊಳ್ಳುವಿರಿ. ಒಂದು ಸಾಲಿನಲ್ಲಿ ಇರುವ ವೃತ್ತಗಳಲ್ಲಿ ಎರಡು ವೃತ್ತಗಳಿಗೆ ಗುರುತು ಮಾಡಿದ್ದು, ಅವೆರಡರಲ್ಲಿ ಯಾವುದೇ ಒಂದು ವೃತ್ತವನ್ನು ಭಾಗಶಃ ಅಳಿಸಿದ್ದರೂ ಸಹ, ಅದನ್ನು ಸ್ಕ್ಯಾನರ್ ಬಹು ಉತ್ತರಗಳೆಂದೇ ಪರಿಗಣಿಸುತ್ತದೆ. ಆದ್ದರಿಂದ, ಶಾಯಿಯಿಂದ ವೃತ್ತಕ್ಕೆ ಗುರುತು ಮಾಡುವ ಮುನ್ನ ಸರಿಯಾಗಿ ಆಲೋಚಿಸಿ. ಗುರುತು ಮಾಡುವ ಸರಿಯಾದ ವಿಧಾನದಲ್ಲಿ ತೋರಿಸಿರುವಂತೆ, ಪ್ರತಿ ಪ್ರಶ್ನೆಗೆ ಒಂದೇ ಒಂದು ವೃತ್ತವನ್ನು ಮಾತ್ರ ಗುರುತು ಮಾಡಿ.

## 13. ಸಮಾನ ಅಂಕಗಳು ಬಂದಾಗ ಮೆರಿಟ್ ನಿರ್ಣಯ

ಒಂದು ವೇಳೆ ಎರಡು ಅಥವಾ ಅದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳು ಒಂದೇ ಆಗಿದ್ದಲ್ಲಿ ಆ ಅಭ್ಯರ್ಥಿಗಳ ವಯಸ್ಸಿನ ಅಧಾರದ ಮೇಲೆ ಅವರ ನಡುವಿನ ಮೆರಿಟ್‌ನ್ನು ನಿರ್ಧರಿಸಲಾಗುವುದು. ಅಂದರೆ ಇಂತಹ ಅಭ್ಯರ್ಥಿಗಳ ಪೈಕಿ ವಯಸ್ಸಿನಲ್ಲಿ ಕಿರಿಯನಾದ ಅಭ್ಯರ್ಥಿಗಿಂತ ಹಿರಿಯನಾದ ಅಭ್ಯರ್ಥಿಯನ್ನು ಮೊದಲು ಪರಿಗಣಿಸಲಾಗುವುದು. ಆದಾಗ್ಯೂ ಎರಡು ಅಥವಾ ಅದಕ್ಕಿಂತ ಹೆಚ್ಚು ಸಮ ವಯಸ್ಸಿನ ಅಭ್ಯರ್ಥಿಗಳು ಇದ್ದ ಪಕ್ಷದಲ್ಲಿ ಅಭ್ಯರ್ಥಿಯ ಹೆಸರಿನ ವರ್ಣಾಕ್ಷರದ ಕ್ರಮನುಸಾರ ಮೆರಿಟ್ ನಿರ್ಧರಿಸಲಾಗುವುದು, ಆದಾಗ್ಯೂ ಎರಡು ಅಥವಾ ಅದಕ್ಕಿಂತ ಹೆಚ್ಚು ಸಮ ವಯಸ್ಸಿನ ಅಭ್ಯರ್ಥಿಗಳು ಇದ್ದ ಪಕ್ಷದಲ್ಲಿ ತಂದೆಯ ಹೆಸರಿನ ವರ್ಣಾಕ್ಷರದ ಕ್ರಮಾನುಸಾರ ಮೆರಿಟ್ ಪಟ್ಟಿ ನಿರ್ಧರಿಸಲಾಗುವುದು.

## 14. ಫಲಿತಾಂಶ (ಮೆರಿಟ್ ಪಟ್ಟಿ) ಪ್ರಕಟಣೆ:

ಪ್ರವೇಶ ಪರೀಕ್ಷೆ ಮುಗಿದ ನಂತರ, ತಾತ್ಕಾಲಿಕ ಕೀ ಉತ್ತರಗಳನ್ನು ನಿಗದಿಪಡಿಸಿದ ದಿನಾಂಕದಂದು ಕ.ಪ.ಪ್ರಾ.ದ ವೆಬ್‌ಸೈಟ್ http://kea.kar.nic.in ನಲ್ಲಿ ಪ್ರಕಟಿಸಲಾಗುವುದು. ಹೀಗೆ ಪ್ರಕಟಿಸಲಾದ ಯಾವುದೇ ತಾತ್ಕಾಲಿಕ ಕೀ ಉತ್ತರಕ್ಕೆ ಸಂಬಂಧಿಸಿದಂತೆ, ವಿದ್ಯಾರ್ಥಿಗಳು / ಪೋಷಕರಲ್ಲಿ ಯಾವುದೇ ಆಕ್ಷೇಪಗಳಿದ್ದ ಪಕ್ಷದಲ್ಲಿ, ಅವುಗಳಿಗೆ ಸಂಬಂಧಿಸಿದ ಎಲ್ಲಾ ಪೂರಕ ದಾಖಲೆಗಳು / ಸಮರ್ಥನೆಗಳ ಜೊತೆಯಲ್ಲಿ, ಅಂಥ ಆಕ್ಷೇಪಣೆಗಳನ್ನು ಮುಂದೆ ಪ್ರಕಟಿಸಲಾಗುವ ನಿಗದಿತ ದಿನಾಂಕದೊಳಗೆ ಸಲ್ಲಿಸಬೇಕಿರುತ್ತದೆ. ಕ.ಪ.ಪ್ರಾ. ಸ್ವೀಕರಿಸಿದ ಇಂಥ ಆಕ್ಷೇಪಣೆಗಳನ್ನು ವಿಷಯ ತಜ್ಞರ ಸಮಿತಿಯ ಮುಂದೆ ಮಂಡಿಸಲಾಗುವುದು. ಸರಿಯಾದ ಕೀ ಉತ್ತರವನ್ನು ನಿರ್ಣಯಿಸುವುದಕ್ಕೆ ಸಂಬಂಧಿಸಿದಂತೆ ಈ ಸಮಿತಿ ನೀಡುವ ನಿರ್ಣಯವೇ ಅಂತಿಮವಾಗಿರುತ್ತದೆ. ವಿಷಯ ತಜ್ಞರ ಸಮಿತಿ ಅನುಮೋದಿಸಿದ ಕೀ ಉತ್ತರವನ್ನು, ಮೆರಿಟ್ ಕ್ರಮವನ್ನು ನಿರ್ಣಯಿಸುವುದಕ್ಕೆ ಸಂಬಂಧಿಸಿದಂತೆ ಮೌಲ್ಯಮಾಪನದ ಸಮಯದಲ್ಲಿ ಅನ್ವಯಿಸಲಾಗುವುದು.

***ಸೂಚನೆ:*** **ಮೌಲ್ಯಮಾಪನ ಮಾಡುವ ಮತ್ತು ಅಂಕ ನೀಡುವ ಪದ್ಧತಿಯು ಸಂಪೂರ್ಣವಾಗಿ ದೋಷರಹಿತ ವಾಗಿರುವುದರಿಂದ, ಒಎಂಆರ್ ಉತ್ತರ ಹಾಳೆಗಳ ಮರು–ಎಣಿಕೆಗೆ ಅಥವಾ ಮರುಮೌಲ್ಯಮಾಪನಕ್ಕೆ ಸಂಬಂಧಿಸಿದ ಮನವಿಗಳನ್ನು ಸ್ವೀಕರಿಸುವುದಿಲ್ಲ.**

## 15. ಸೀಟು ಹಂಚಿಕೆ ಮತ್ತು ದಾಖಲಾತಿ:

**ವಿಶೇಷ ಸೂಚನೆ:** ಯಾವುದೇ ಸುತ್ತಿನ ಸೀಟು ಹಂಚಿಕೆಯ ನಂತರ ಒಂದೊಮ್ಮೆ ಅರ್ಜಿಯಲ್ಲಿ ನಮೂದಿಸಿರುವ ಮಾಹಿತಿಯು ದಾಖಲೆ ಪರಿಶೀಲನೆ ಸಂದರ್ಭದಲ್ಲಿ ಹಾಜರುಪಡಿಸದಿದ್ದರೆ ಅಥವಾ ತಪ್ಪು ಮಾಹಿತಿ ನೀಡಿದರೆ, ಅಂತಹ ಅಭ್ಯರ್ಥಿಯ ಆಯ್ಕೆಯು ಅನೂರ್ಜಿತಗೊಳ್ಳುತ್ತದೆ. ನಿಗದಿಪಡಿಸಿದ ದಿನಾಂಕದೊಳಗೆ ದಾಖಲೆ ಪರಿಶೀಲನೆಗೆ ಹಾಜರಾಗಿ ಪ್ರವೇಶ ಪಡೆಯದ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಪಡಿಸಲಾಗುವುದು. ಒಮ್ಮೆ ಆಯ್ಕೆಗೊಂಡ ಅಭ್ಯರ್ಥಿಯು ಮತ್ತೊಮ್ಮೆ ಆಯ್ಕೆ ಬಯಸಲು ಅವಕಾಶ ವಿರುವುದಿಲ್ಲ ಹಾಗೆಯೇ ವಸತಿ ಶಾಲೆಯನ್ನೂ ಸಹ ಬದಲಾಯಿಸಿಕೊಳ್ಳಲು ಅವಕಾಶವಿರುವುದಿಲ್ಲ.

**ಜಿಲ್ಲಾ ಮಟ್ಟದ ಮೊದಲ ಸುತ್ತಿನ ಸೀಟು ಹಂಚಿಕೆ:–** ಪ್ರವೇಶ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಪಡೆದ ಅಂಕಗಳ ಆಧಾರದ ಮೇಲೆ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸಿ, ಮೊದಲ ಸುತ್ತಿನ ಜಿಲ್ಲಾ ಮಟ್ಟದ ಆನ್‌ಲೈನ್ ಸೀಟ್ ಹಂಚಿಕೆಯನ್ನು, ಅಭ್ಯರ್ಥಿಯು ನೀಡಿದ ಶಾಲಾವಾರು ಆದ್ಯತೆ ಹಾಗೂ ಸರ್ಕಾರವು ನಿಗಧಿಪಡಿಸಿದ ಮೀಸಲಾತಿಗನುಗುಣವಾಗಿ ಹಂಚಿಕೆ ಮಾಡಲಾಗುವುದು. ಸೀಟು ಹಂಚಿಕೆಯ ಫಲಿತಾಂಶವನ್ನು ವೆಬ್‌ಸೈಟ್ http://kea.kar.nic.in ನಲ್ಲಿ ಪ್ರಕಟಿಸಲಾಗುವುದು. ಮೊದಲ ಸುತ್ತಿನಲ್ಲಿ ಸೀಟು ಹಂಚಿಕೆ ಪಡೆದ ಅಭ್ಯರ್ಥಿಗಳು ನಿಗದಿತ ಸಮಯದೊಳಗೆ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಸಂಬಂಧಿಸಿದ ವಸತಿ ಶಾಲೆಗೆ ತಪ್ಪದೆ ಪ್ರವೇಶ ಪಡೆಯತಕ್ಕದ್ದು.

ಮೊದಲನೇ ಸುತ್ತಿನಲ್ಲಿ ಹಂಚಿಕೆಯಾಗದೆ ಖಾಲಿ ಉಳಿದ ಸೀಟುಗಳು ಹಾಗೂ ಮೊದಲನೇ ಸುತ್ತಿನಲ್ಲಿ ಹಂಚಿಕೆ ಪಡೆದು ಶಾಲೆಗೆ ದಾಖಲಾಗದೇ ಉಳಿದ ಸೀಟುಗಳನ್ನು ಕ್ರೂಢೀಕರಿಸಿ, ಮುಂದಿನ ಸುತ್ತಿನ ಜಿಲ್ಲಾ ಮಟ್ಟದ ಆನ್‌ಲೈನ್ ಸೀಟು ಹಂಚಿಕೆಯನ್ನು ಯಾವುದೇ ಸೀಟು ಹಂಚಿಕೆಯಾಗದೇ ಇರುವ ಅಭ್ಯರ್ಥಿಗಳಿಗೆ ಮಾತ್ರ ಕೌನ್ಸಲಿಂಗ್ ನಡೆಸಲಾಗುವುದು. ಸೀಟು ಹಂಚಿಕೆಯ ಫಲಿತಾಂಶವನ್ನು ವೆಬ್‌ಸೈಟ್ http://kea.kar.nic.in ನಲ್ಲಿ ಪ್ರಕಟಿಸಲಾಗುವುದು. ಈ ಸುತ್ತಿನಲ್ಲಿ ಸೀಟು ಹಂಚಿಕೆ ಪಡೆದ ಅಭ್ಯರ್ಥಿಗಳು ನಿಗದಿತ ಸಮಯದೊಳಗೆ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಸಂಬಂಧಿಸಿದ ವಸತಿ ಶಾಲೆಗೆ ತಪ್ಪದೆ ಪ್ರವೇಶ ಪಡೆಯತಕ್ಕದ್ದು.

**ರಾಜ್ಯ ಮಟ್ಟದ ಸೀಟು ಹಂಚಿಕೆ:–** ಜಿಲ್ಲಾ ಹಂತದ ಎಲ್ಲಾ ಸುತ್ತಿನ ಕೌನ್ಸಿಲಿಂಗ್ ನಂತರ ಹಂಚಿಕೆಯಾಗದೆ ಖಾಲಿ ಉಳಿದ ಸೀಟುಗಳನ್ನು ಕ್ರೂಢೀಕರಿಸಿ ರಾಜ್ಯ ಮಟ್ಟದ ಸೀಟು ಹಂಚಿಕೆ ಪ್ರಕ್ರಿಯೆಯನ್ನು ನಡೆಸಲಾಗುವುದು. ಜಿಲ್ಲಾ ಮಟ್ಟದಲ್ಲಿ ಪ್ರವೇಶ ದೊರೆಯದ ಅಭ್ಯರ್ಥಿಗಳು ಮಾತ್ರ ರಾಜ್ಯ ಮಟ್ಟದ ಕೌನ್ಸಿಲಿಂಗ್‌ಗೆ ಅರ್ಹರಿರುತ್ತಾರೆ. ಆದ್ದರಿಂದ ರಾಜ್ಯ ಮಟ್ಟದ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಆಸಕ್ತಿ ಇರುವ ಅಭ್ಯರ್ಥಿಗಳು ನಿಗದಿತ ಸಮಯದೊಳಗೆ ಖಾಲಿ ಸ್ಥಾನಗಳು ಲಭ್ಯವಿರುವ ಶಾಲೆಗಳ ಪೈಕಿ ತಮಗೆ ಇಷ್ಟವಿರುವ ಶಾಲೆಗಳ ಆಯ್ಕೆಯನ್ನು ಈ ಹಿಂದೆ ಅರ್ಜಿ ಸಲ್ಲಿಸಿದ ವಸತಿ ಶಾಲೆಯಿಂದ ಹೊಸದಾಗಿ ನಮೂದಿಸತಕ್ಕದ್ದು. ಈ ರೀತಿ ಹೊಸದಾಗಿ ಆದ್ಯತೆಗಳನ್ನು ನೀಡಿದ ಅಭ್ಯರ್ಥಿಗಳಿಗೆ ಮಾತ್ರ ರಾಜ್ಯ ಮಟ್ಟದ ಅನ್‌ಲೈನ್ ಕೌನ್ಸಿಲಿಂಗ್ ಅನ್ನು ನಡೆಸಲಾಗುವುದು.

ಸೀಟುಗಳ ಲಭ್ಯತೆಯ ಆಧಾರದ ಮೇಲೆ ಸರ್ಕಾರವು ಕಾಲ ಕಾಲಕ್ಕೆ ನೀಡುವ ನಿರ್ದೇಶನದಂತೆ ರಾಜ್ಯ ಮಟ್ಟದ ಕೌನ್ಸಿಲಿಂಗ್ ಅನ್ನು ನಡೆಸಲಾಗುವುದು.

**ಸೀಟು ಹಂಚಿಕೆ – ವಿಶೇಷ ಸೂಚನೆಗಳು:**

1. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಭ್ಯರ್ಥಿಯು ಸೇರಬಯಸುವ ವಸತಿ ಶಾಲೆಗಳ ವಿವರಗಳನ್ನು ಅಂದರೆ ಇಚ್ಛೆ (Options) ಗಳನ್ನು ಕಡ್ಡಾಯವಾಗಿ ಆದ್ಯತಾ ಕ್ರಮದಲ್ಲಿ ನಮೂದಿಸಬೇಕು. ಒಂದು ವೇಳೆ ಅಭ್ಯರ್ಥಿಯು ಆದ್ಯತಾ ಕ್ರಮದಲ್ಲಿ ಯಾವುದೇ ಶಾಲೆಗಳ ವಿವರಗಳನ್ನು ನೀಡದಿದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ಸೀಟು ಹಂಚಿಕೆಗೆ ಪರಿಗಣಿಸಲಾಗುವುದಿಲ್ಲ.
2. ಇಚ್ಛೆ (Options) ಗಳನ್ನು ಎಷ್ಟು ಬೇಕಾದರೂ ನಮೂದಿಸಬಹುದು. ಅದಕ್ಕೆ ಯಾವುದೇ ಸಂಖ್ಯಾಮಿತಿ ಇರುವುದಿಲ್ಲ. ಒಬ್ಬ ವಿದ್ಯಾರ್ಥಿ/ನಿಯು, ತನ್ನ ಸ್ವಂತ ಆದ್ಯತೆಗೆ ಅನುಗುಣವಾಗಿ ತಾನು ಬಯಸುವಷ್ಟು ಸಂಖ್ಯೆಯ ಇಚ್ಛೆಗಳನ್ನು ನಮೂದಿಸಬಹುದು. ಸೀಟು ಸಿಗದಿದ್ದ ಪಕ್ಷದಲ್ಲಿ ಉಂಟಾಗುವ ನಿರಾಸೆಯನ್ನು ತಪ್ಪಿಸುವ ದೃಷ್ಟಿಯಿಂದ, ವಿದ್ಯಾರ್ಥಿಗಳು ಇಚ್ಛೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನಮೂದಿಸುವಂತೆ ಸಲಹೆ ನೀಡಲಾಗಿದೆ.
3. ವಿದ್ಯಾರ್ಥಿಗಳು, ಯಾವ ಆಯ್ಕೆಗಳನ್ನು ನಮೂದಿಸಬೇಕು ಎನ್ನುವುದನ್ನು ಕುರಿತು ಮನೆಯಲ್ಲಿ ಪೂರ್ವಭಾವಿ ಸಿದ್ಧತೆಯನ್ನು ಮಾಡಿಕೊಳ್ಳುವುದು ಸೂಕ್ತ. ವಿದ್ಯಾರ್ಥಿಯು ಅಧಿಸೂಚನೆಯಲ್ಲಿ ನೀಡಿರುವ ಶಾಲೆಯ ಹೆಸರುಗಳನ್ನು ಒಂದು ಪ್ರತ್ಯೇಕವಾದ ಹಾಳೆಯಲ್ಲಿ ಬರೆದುಕೊಳ್ಳಬೇಕು.
4. ನಂತರ ಈ ರೀತಿ ಬರೆದುಕೊಂಡ ನಂತರ ಶಾಲೆಗಳ ಪಟ್ಟಿಗೆ ಆದ್ಯತಾ ಕ್ರಮದ ಸಂಖ್ಯೆಯನ್ನು ನೀಡಬೇಕು.
5. ನಂತರ ನಿಮಗೆ ಅತ್ಯಂತ ಹೆಚ್ಚು ಇಷ್ಟವಿರುವ ಶಾಲೆಯನ್ನು ಮೊದಲ ಆದ್ಯತೆಯ ಕ್ರಮ ಸಂಖ್ಯೆಗಳಲ್ಲಿ ನಮೂದಿಸಿ. ಆನಂತರ ಇಷ್ಟವಿರುವ ಇತರ ಶಾಲೆಗಳನ್ನು ನಮೂದಿಸಿ. ಹೀಗೆ ಮೊದಲಿನ ಇಚ್ಛೆಗೆ ಶೇ. 100ರಷ್ಟು ಆದ್ಯತೆಯೆಂದು ಪರಿಗಣಿಸಿದರೆ, ನಂತರದ ಆದ್ಯತೆಗಳು ಇಳಿಕೆ / ಅವರೋಹಣ (descending) ಕ್ರಮದಲ್ಲಿ ಇರಬೇಕು.
6. ಸೀಟು ಹಂಚಿಕೆ ಪಡೆದ ಪ್ರತಿಯೊಬ್ಬ ಅಭ್ಯರ್ಥಿಯೂ ಕೂಡ ನಿಗದಿತ ಸಮಯದೊಳಗೆ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಸಂಬಂಧಿಸಿದ ವಸತಿ ಶಾಲೆಗೆ ಕಡ್ಡಾಯವಾಗಿ ಪ್ರವೇಶ ಪಡೆಯತಕ್ಕದ್ದು.

## ವಂಚಕರ ಬಗ್ಗೆ ಎಚ್ಚರದಿಂದಿರಿ

ಕೆಲವು ವ್ಯಕ್ತಿಗಳು, ಕ.ಪ.ಪ್ರಾ.ದ ಅಧಿಕಾರಿಗಳು ನಮಗೆ ಚೆನ್ನಾಗಿ ಗೊತ್ತು ಎಂದು ಹೇಳಿಕೊಂಡು ಕ.ಪ.ಪ್ರಾ.ದ ಮೂಲಕ ಅಕ್ರಮವಾಗಿ ನಿಮಗೆ ಸೀಟು ದೊರಕಿಸಿಕೊಡುವ ಆಶ್ವಾಸನೆ ನೀಡಬಹುದು. ಆದರೆ, ಕ.ಪ.ಪ್ರಾ.ವು ಸೀಟು ಹಂಚಿಕೆಯಲ್ಲಿ ಯಾವುದೇ ಅಕ್ರಮ ವ್ಯವಹಾರಕ್ಕೆ ಆಸ್ಪದ ನೀಡುವುದಿಲ್ಲ. ಅಂಥ ಯಾರಾದರೂ ವ್ಯಕ್ತಿಗಳು ನಿಮ್ಮ ಗಮನಕ್ಕೆ ಬಂದ ಪಕ್ಷದಲ್ಲಿ, ಕೂಡಲೇ ಲಿಖಿತ ರೂಪದಲ್ಲಿಯಾಗಲೀ ಅಥವಾ ಪ್ರಾಧಿಕಾರಕ್ಕೆ ಇ–ಮೇಲ್ ಮಾಡುವ ಮೂಲಕವಾಗಲೀ ಕ.ಪ.ಪ್ರಾ. ದ ಅಧಿಕಾರಿಗಳಿಗೆ ತಕ್ಷಣ ಮಾಹಿತಿ ನೀಡಿ. ಸೀಟು ಹಂಚಿಕೆಯು, ಸರ್ಕಾರ ನೀಡುವ ಸೀಟ್ ಮ್ಯಾಟ್ರಿಕ್ಸ್ ಅನ್ನು ಕಟ್ಟುನಿಟ್ಟಾಗಿ ಆಧರಿಸಿರುತ್ತದೆ. ಹಾಗೆಯೇ, ವಿದ್ಯಾರ್ಥಿ/ನಿಯ ಮೆರಿಟ್ ಮತ್ತು ಆತ/ ಆಕೆ ನಮೂದಿಸಿರುವ ಇಚ್ಛೆಯನ್ನು ಮಾತ್ರವೇ ಆಧರಿಸಿ ಅವರಿಗೆ ಸೀಟನ್ನು ಹಂಚಿಕೆ ಮಾಡಲಾಗುವುದು. ಆದ್ದರಿಂದ, ಸುಳ್ಳು ಆಶ್ವಾಸನೆಗಳನ್ನು ಕೊಡುವ ಯಾರೇ ಅಪರಿಚಿತ ವ್ಯಕ್ತಿಗಳನ್ನು ನಂಬಬೇಡಿ.